Boundaries of the village Hosura

East: Boundary of Giddanaykanahal village	**West:** Boundaries of Jalihal, Hirenasabi and Navilahole villages
North: Boundaries of Mangalore and Ramapura villages	**South:** Boundaries of Guddadamallapura and Sarjapura villages.

The proposals specified above shall come into effect from such date of final notification to be published in the official Gazette by the state Government under section 5 of the Karnataka Land Revenue Act, 1964 (Karnataka Act No 12 of 1964).

By Order and in the name of the
Governor of Karnataka

(Dr. M.N. Rajendra Prasad)
Director, Cell for Creation of Revenue Villages
and Ex-officio Deputy Secretary to Govt.
Revenue Department

PR-99

ಕರ್ನಾಟಕ ಸರ್ಕಾರ

ಸಂಖ್ಯೆ: ನಅಇ 27 ಟಿಟಿಪಿ 2016

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸಸೌಧ,
ಬೆಂಗಳೂರು, ದಿನಾಂಕ: 24.05.2017.

ಅಧಿಸೂಚನೆ

ಕರ್ನಾಟಕ ಯೋಜನಾ ಪ್ರಾಧಿಕಾರಗಳ (ನಾಗರೀಕ ಸೌಕರ್ಯ ನಿವೇಶನಗಳ ಹಂಚಿಕೆ) ನಿಯಮಗಳು, 2016ರ ಕರಡನ್ನು, ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯ ಭಾಗ-IV ಎ, ದಿನಾಂಕ:18.11.2016 ರಲ್ಲಿ, ಅಧಿಸೂಚನೆ ಸಂ.ಯುಡಿಡಿ 27 ಟಿಟಿಪಿ 2016, ದಿನಾಂಕ 18-11-2016 ರ ಮೇರೆಗೆ, ಅಧಿಕೃತ ರಾಜ್ಯಪತ್ರದಲ್ಲಿ ಅವುಗಳನ್ನು ಪ್ರಕಟಿಸಿದ ದಿನಾಂಕದಿಂದ 30 ದಿನಗಳೊಳಗೆ ಅದರಿಂದ ಬಾಧಿತರಾಗಬಹುದಾದ ಎಲ್ಲಾ ವ್ಯಕ್ತಿಗಳಿಂದ ಆಕ್ಷೇಪಣೆಗಳನ್ನು ಹಾಗೂ ಸಲಹೆಗಳನ್ನು ಆಹ್ವಾನಿಸಿ ಪ್ರಕಟಿಸಿರುವುದರಿಂದ,

ಸದರಿ ರಾಜ್ಯಪತ್ರವನ್ನು ದಿನಾಂಕ:18-11-2016ರಂದು ಸಾರ್ವಜನಿಕರಿಗೆ ಲಭ್ಯವಾಗುವಂತೆ ಮಾಡಿರುವುದರಿಂದ,

ಸದರಿ ಕರಡಿಗೆ ಸಂಬಂಧಿಸಿದಂತೆ, ಸ್ವೀಕರಿಸಲಾದ ಆಕ್ಷೇಪಣೆಗಳನ್ನು ಹಾಗೂ ಸಲಹೆಗಳನ್ನು ರಾಜ್ಯ ಸರ್ಕಾರವು ಪರಿಗಣಿಸಿರುವುದರಿಂದ.

ಆದ್ದರಿಂದ ಈಗ, ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ ಅಧಿನಿಯಮ, 1961 (1963ರ ಕರ್ನಾಟಕ ಅಧಿನಿಯಮ 11)ರ 74ನೇ ಪ್ರಕರಣದ (2)ನೇ ಉಪ-ಪ್ರಕರಣದ (ಎಫ್ಎಫ್) ಖಂಡದೊಂದಿಗೆ ಓದಲಾದ 17 (2ಎ) ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, ಈ ಮೂಲಕ ಮುಂದಿನ ನಿಯಮಗಳನ್ನು ರಚಿಸುತ್ತದೆ, ಎಂದರೆ:-

ನಿಯಮಗಳು

1. ಶೀರ್ಷಿಕೆ, ಪ್ರಾರಂಭ ಮತ್ತು ಅನ್ವಯ:- (1) ಈ ನಿಯಮಗಳನ್ನು, ಕರ್ನಾಟಕ ಯೋಜನಾ ಪ್ರಾಧಿಕಾರಗಳ (ನಾಗರೀಕ ಸೌಕರ್ಯ ನಿವೇಶನಗಳ ಹಂಚಿಕೆ) ನಿಯಮಗಳು, 2016 ಎಂದು ಕರೆಯತಕ್ಕದ್ದು.

(2) ಇವು, ಸರ್ಕಾರಿ ರಾಜ್ಯಪತ್ರದಲ್ಲಿ ಅವುಗಳನ್ನು ಪ್ರಕಟಿಸಿದ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

(3) ಈ ನಿಯಮಗಳು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ, 1976 (1976ರ ಕರ್ನಾಟಕ ಅಧಿನಿಯಮ 12) ರ ಮೇರೆಗೆ ರಚಿಸಲಾಗಿರುವ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಹಾಗೂ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರ ಅಧಿನಿಯಮ, 1987 (1987ರ ಕರ್ನಾಟಕ ಅಧಿನಿಯಮ 34)ರ ಮೇರೆಗೆ ರಚಿಸಲಾಗಿರುವ ನಗರಾಭಿವೃದ್ಧಿ ಪ್ರಾಧಿಕಾರಗಳನ್ನು ಹೊರತುಪಡಿಸಿ, ರಾಜ್ಯದಲ್ಲಿರುವ ಎಲ್ಲಾ ಯೋಜನಾ ಪ್ರಾಧಿಕಾರಗಳಿಗೆ ಅನ್ವಯವಾಗತಕ್ಕದ್ದು.

2. ಪರಿಭಾಷೆಗಳು:- (1) ಈ ನಿಯಮಗಳಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

(ಎ) **"ಅಧಿನಿಯಮ"** ಎಂದರೆ, ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನಾ ಅಧಿನಿಯಮ, 1961 (1963ರ ಕರ್ನಾಟಕ ಅಧಿನಿಯಮ 11);

(ಬಿ) **"ಪ್ರಾಧಿಕಾರ"** ಎಂದರೆ ಈ ಅಧಿನಿಯಮದ **2(7)ನೇ ಪ್ರಕರಣದ ಮೇರೆಗೆ** ಪರಿಭಾಷಿಸಲಾದ ಯೋಜನಾ ಪ್ರಾಧಿಕಾರ;

(ಸಿ) **"ನಾಗರೀಕ ಸೌಕರ್ಯ"** ಎಂದರೆ.-

(1) ಕೇಂದ್ರ ಅಥವಾ ರಾಜ್ಯ ಸರ್ಕಾರದ ಇಲಾಖೆ, ಶಾಸನಬದ್ಧ ಸಂಸ್ಥೆ ಮತ್ತು ಸ್ಥಳೀಯ ಪ್ರಾಧಿಕಾರವು ಒದಗಿಸಿದ ಈ ಮುಂದಿನ ನಾಗರೀಕ ಸೌಕರ್ಯಗಳು, ಎಂದರೆ:-

(ಎ)
(i) ಜಲ ಸಂಸ್ಕರಣಾ ಘಟಕಗಳು, ಸಂಗ್ರಹಣಾ ಜಲಾಶಯಗಳು ಹಾಗೂ ಮಧ್ಯಂತರ ಪಂಪಿಂಗ್, ಕೇಂದ್ರಗಳನ್ನು ಒಳಗೊಂಡಂತೆ ನೀರು ಸರಬರಾಜು ಘಟಕಗಳು;

(ii) ರೊಚ್ಚು ತೊಟ್ಟಿಗಳು (ಸೆಪ್ಟಿಕ್ ಟ್ಯಾಂಕ್ ಗಳು):- ಜಲಾವೃತ ಗುಂಡಿಗಳು (ಸೋಕ್ ಪಿಟ್ಸ್) ಮತ್ತು ಸ್ಥಳೀಯ ಒಳಚರಂಡಿ ಸಂಸ್ಕರಣಾ ಘಟಕಗಳನ್ನು ಒಳಗೊಂಡಂತೆ ಚರಂಡಿ ಮತ್ತು ನೈರ್ಮಲ್ಯ ಘಟಕಗಳು;

(iii) ಉಪ-ಕೇಂದ್ರಗಳು ಮತ್ತು ವಿದ್ಯುತ್ ಪರಿವರ್ತಕ ಪ್ರಾಂಗಣಗಳು;

(iv) ತ್ಯಾಜ್ಯ ಸಂಗ್ರಹಣೆ, ಪ್ರತ್ಯೇಕೀರಣ ಮತ್ತು ಮರುಬಳಕೆಯ ಕೇಂದ್ರಗಳು; ಮತ್ತು

(v) ಸಾರ್ವಜನಿಕ ಶೌಚಾಲಯಗಳು.

(ಬಿ)
(i) ಆರೋಗ್ಯ ಸೌಲಭ್ಯಗಳು ಮತ್ತು ಶೈಕ್ಷಣಿಕ ಸಂಸ್ಥೆಗಳು;

(ii) ಮಾರುಕಟ್ಟೆಗಳು, ಹಾಲಿನ ಬೂತ್‌ಗಳು ಹಾಗೂ ನ್ಯಾಯ ಬೆಲೆ ಅಂಗಡಿಗಳು;

(iii) ಬಸ್ ನಿಲ್ದಾಣಗಳು;

(iv) ಕ್ಷೇತ್ರ ಕಚೇರಿ ಅಥವಾ ಸ್ಥಳೀಯ ಪ್ರಾಧಿಕಾರದ ಸೇವಾ ಕೇಂದ್ರ ಅಥವಾ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ

ಅಥವಾ ವಿದ್ಯುತ್ ಸರಬರಾಜು ಕಂಪನಿಗಳು (ESCOM) ಮತ್ತು ಸರ್ಕಾರಿ ಇಲಾಖೆಗಳು ಒದಗಿಸುವ ಇತರ ಸೌಕರ್ಯಗಳು ಹಾಗೂ ಸಾರ್ವಜನಿಕ ಸೌಲಭ್ಯಗಳನ್ನು ಒದಗಿಸುವ ಶಾಸನಬದ್ಧ ಸಂಸ್ಥೆಗಳು;

(v) ಅಂಚೆ ಕಚೇರಿ ಮತ್ತು ಬ್ಯಾಂಕ್;

(vi) ವ್ಯಾಯಾಮ ಶಾಲೆಗಳು (ಜಿಮ್ನಾಸಿಯಂ) ಮತ್ತು ಗ್ರಂಥಾಲಯಗಳು; ಹಾಗೂ

(vii) ಪೋಲಿಸ್ ಠಾಣೆ ಮತ್ತು ಅಗ್ನಿಶಾಮಕ ಕೇಂದ್ರ.

(ಸಿ) ಕೇಂದ್ರ ಅಥವಾ ರಾಜ್ಯ ಸರ್ಕಾರಿ ಕಚೇರಿಗಳು, ಮನೋರಂಜನಾ ಕೇಂದ್ರಗಳು, ಧಾರ್ಮಿಕ ಹಾಗೂ ಸಾಂಸ್ಕೃತಿಕ ಚಟುವಟಿಕೆ ಕೇಂದ್ರಗಳು; ಹಾಗೂ

(ಡಿ) ರಾಜ್ಯ ಸರ್ಕಾರವು ನಡೆಸುತ್ತಿರುವ ಅಂಗನವಾಡಿ ಕೇಂದ್ರಗಳು ಹಾಗೂ ಹಾಸ್ಟೆಲುಗಳು.

(2) ಸ್ಥಳೀಯ ಪ್ರಾಧಿಕಾರವು ನಿರ್ಮಿಸಿ ನಡೆಸುವ ಕನ್‌ವೆನ್‌ಷನ್ ಕೇಂದ್ರಗಳು;

(3) ಶೈಕ್ಷಣಿಕ ಸಂಸ್ಥೆಗಳಂಥ ಲಾಭರಹಿತ ವ್ಯವಸ್ಥೆಯ ಆಧಾರದ ಮೇಲೆ ಒಂದು ಸಂಸ್ಥೆಯ ಮೂಲಕ ಬರುವ ಸೌಕರ್ಯ ಮತ್ತು ಲಾಭರಹಿತವಾಗಿ ನಡೆಸುವ ಆರೋಗ್ಯ ಸೌಲಭ್ಯಗಳು, ಧಾರ್ಮಿಕ ಹಾಗೂ ಸಾಂಸ್ಕೃತಿಕ ಚಟುವಟಿಕೆ ಕೇಂದ್ರಗಳು, ಧರ್ಮಾರ್ಥ ಅಥವಾ ಪರೋಪಕಾರ ಸೇವೆಗಳು; ಮತ್ತು

(4) ಸರ್ಕಾರವು ಅಧಿಸೂಚನೆ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ಇತರೆ ಯಾವುದೇ ಸೌಕರ್ಯಗಳು.

(ಡಿ) **"ನಾಗರೀಕ ಸೌಕರ್ಯ ನಿವೇಶನ"** ಎಂದರೆ, 17ನೇ ಪ್ರಕರಣದ ಮೇರೆಗೆ ಯೋಜನಾ ಪ್ರಾಧಿಕಾರವು ಅನುಮೋದಿಸಿದ ಬಡಾವಣೆಯಲ್ಲಿ ನಾಗರೀಕ ಸೌಕರ್ಯಕ್ಕಾಗಿ ಮೀಸಲಿಟ್ಟ ನಿವೇಶನ;

(ಇ) **"ನಮೂನೆ"** ಎಂದರೆ, ಈ ನಿಯಮಗಳಿಗೆ ಅನುಬಂಧಿಸಲಾದ ನಮೂನೆ;

(ಎಫ್) **"ಸಂಸ್ಥೆ"** ಎಂದರೆ, ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮ, 1960 (1960ರ ಕರ್ನಾಟಕ ಅಧಿನಿಯಮ 17)ರ ಮೇರೆಗೆ ಅಥವಾ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ, 1959 (1959ರ ಕರ್ನಾಟಕ ಅಧಿನಿಯಮ 11)ರ ಮೇರೆಗೆ ನೋಂದಾಯಿತವಾದ ಒಂದು ಸಂಘ ಅಥವಾ ಒಂದು ಸಂಸ್ಥೆ ಅಥವಾ ಶೈಕ್ಷಣಿಕ, ಧಾರ್ಮಿಕ ಅಥವಾ ಸಾಂಸ್ಕೃತಿಕ ಸಂಸ್ಥೆಗಳಾಗಿರಬಹುದಾದ ಸಂಪೂರ್ಣವಾಗಿ ಯಾವುದೇ ಧರ್ಮಾರ್ಥ ಉದ್ದೇಶಕ್ಕಾಗಿ ಸೃಜಿಸಲಾದ ಟ್ರಸ್ಟ್;

(ಜಿ) **"ಗುತ್ತಿಗೆ ಮೊಬಲಗು"** ಎಂದರೆ, ನಿವೇಶನದ ಮಾರುಕಟ್ಟೆಯ ಮೌಲ್ಯವನ್ನು ಒಳಗೊಂಡಂತೆ ಸಂಬಂಧಪಟ್ಟ ಎಲ್ಲಾ ಅಂಶಗಳನ್ನು ಪರಿಗಣಿಸಿ ಪ್ರಾಧಿಕಾರವು ನಿಗದಿಪಡಿಸಬಹುದಾದ ಬಾಡಿಗೆ;

(ಹೆಚ್) **"ಗುತ್ತಿಗೆದಾರ"** ಎಂದರೆ, ನಾಗರೀಕ ಸೌಕರ್ಯ ನಿವೇಶನ ಹಂಚಿಕೆಯಾಗಿರುವ ಮತ್ತು ಆ ಬಗ್ಗೆ ಪ್ರಾಧಿಕಾರದೊಂದಿಗೆ ಒಪ್ಪಂದವನ್ನು ಮಾಡಿಕೊಂಡಿರುವ ಒಂದು ಸಂಸ್ಥೆ ಅಥವಾ ಸ್ಥಳೀಯ ಪ್ರಾಧಿಕಾರ ಅಥವಾ ಶಾಸನಾತ್ಮಕ ಸಂಸ್ಥೆ ಅಥವಾ ಕೇಂದ್ರ ಅಥವಾ ರಾಜ್ಯ ಸರ್ಕಾರದ ಇಲಾಖೆ;

(ಐ) **"ಸ್ಥಳೀಯ ಪ್ರಾಧಿಕಾರ"** ಎಂದರೆ, ಕರ್ನಾಟಕ ಪೌರಸಭೆಗಳ ಅಧಿನಿಯಮ, 1964 (1964ರ ಕರ್ನಾಟಕ ಅಧಿನಿಯಮ 22) ಮತ್ತು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 (1993ರ ಕರ್ನಾಟಕ ಅಧಿನಿಯಮ 14)ರ ಅಡಿಯಲ್ಲಿ ರಚಿಸಲಾದ ನಗರ ಮುನ್ಸಿಪಲ್ ಕೌನ್ಸಿಲ್, ಪಟ್ಟಣ ಮುನ್ಸಿಪಲ್ ಕೌನ್ಸಿಲ್, ಪಟ್ಟಣ ಪಂಚಾಯತ್ ಅಥವಾ ಗ್ರಾಮ ಪಂಚಾಯತ್;

(ಜೆ) **"ಮಾರುಕಟ್ಟೆ ಮೌಲ್ಯ"** ಎಂದರೆ, ಕರ್ನಾಟಕ ಸ್ಟ್ಯಾಂಪು ಅಧಿನಿಯಮ, 1957 (1957ರ ಕರ್ನಾಟಕ ಅಧಿನಿಯಮ 34)ರ 45ಬಿ ಪ್ರಕರಣಕ್ಕನುಸಾರವಾಗಿ ಭೂಮಿಯ ಮಾರ್ಗದರ್ಶಿ ಮೌಲ್ಯದ ಪ್ರಕಾರ ನಿರ್ಧರಿಸಲಾದ ಮೌಲ್ಯ; ಮತ್ತು

(ಕೆ) **"ಪ್ರಕರಣ"** ಎಂದರೆ, ಅಧಿನಿಯಮದ ಪ್ರಕರಣ.

(2) ಇದರಲ್ಲಿ ಬಳಸಲಾದ ಆದರೆ ಪರಿಭಾಷಿಸಿಲ್ಲದ ಪದಗಳು ಹಾಗೂ ಅಭಿವ್ಯಕ್ತಿಗಳು, ಅಧಿನಿಯಮದಲ್ಲಿ ಅವುಗಳಿಗೆ ಅನುಕ್ರಮವಾಗಿ ಗೊತ್ತುಪಡಿಸಲಾದಂತಹ ಅದೇ ಅರ್ಥವನ್ನು ಹೊಂದಿರತಕ್ಕದ್ದು.

3. ನಾಗರೀಕ ಸೌಕರ್ಯಗಳಿಗಾಗಿ ಮೀಸಲಿಟ್ಟಿರುವ ಪ್ರದೇಶದ ಹಂಚಿಕೆ.- (1) ಪ್ರಾಧಿಕಾರವು, 17ನೇ ಪ್ರಕರಣದ ಮೇರೆಗೆ ಪ್ರಾಪ್ತವಾದ, ನಾಗರೀಕ ಸೌಕರ್ಯ ನಿವೇಶನಗಳನ್ನು ಈ ನಿಯಮಗಳಲ್ಲಿ ಪರಿಭಾಷಿಸಲಾದಂತಹ ಕೇಂದ್ರ ಮತ್ತು ರಾಜ್ಯ ಸರ್ಕಾರ, ಸ್ಥಳೀಯ ಪ್ರಾಧಿಕಾರಗಳು, ಶಾಸನಾತ್ಮಕ ಸಂಸ್ಥೆಗಳಿಗೆ ಗುತ್ತಿಗೆ ಆಧಾರದ ಮೇಲೆ ಹಂಚಿಕೆ ಮಾಡುವ ಅಧಿಕಾರವನ್ನು ಹೊಂದಿರತಕ್ಕದ್ದು, ಪ್ರಾಧಿಕಾರವು, ಈ ನಿಯಮಗಳಲ್ಲಿ ನಮೂದಿಸಲಾದ ಉದ್ದೇಶವನ್ನು ಹೊರತುಪಡಿಸಿ, ನಾಗರೀಕ ಸೌಕರ್ಯಗಳಿಗಾಗಿ ಮೀಸಲಿಟ್ಟಿರುವ ಯಾವುದೇ ಪ್ರದೇಶವನ್ನು ಮಾರಾಟ ಮಾಡತಕ್ಕದ್ದಲ್ಲ ಅಥವಾ ಅನ್ಯಥಾ ವಿಲೇ ಮಾಡತಕ್ಕದ್ದಲ್ಲ ಮತ್ತು ಹಾಗೆ ಮಾಡಲಾದ ಯಾವುದೇ ವಿಲೇವಾರಿಯು ಅನೂರ್ಜಿತ ಹಾಗೂ ಶೂನ್ಯವಾಗತಕ್ಕದ್ದು:

ಪರಂತು, ಹಂಚಿಕೆದಾರನು ಹಂಚಿಕೆಯ ಷರತ್ತುಗಳನ್ನು ಉಲ್ಲಂಘನೆ ಮಾಡಿದ್ದಲ್ಲಿ, ಪ್ರಾಧಿಕಾರವು, ಅಂಥ ಹಂಚಿಕೆದಾರ ಅಥವಾ ಗುತ್ತಿಗೆದಾರನಿಗೆ ಅಹವಾಲನ್ನು ಹೇಳಿಕೊಳ್ಳಲು ಅವಕಾಶವನ್ನು ನೀಡಿದ ತರುವಾಯ, ಅಂಥ ನಿವೇಶನವನ್ನು ಪುನಃಸ್ವಾಧೀನಪಡಿಸಿಕೊಳ್ಳುವ ಹಕ್ಕನ್ನು ಹೊಂದಿರತಕ್ಕದ್ದು.

(2) ಪ್ರಾಧಿಕಾರವು, (ಅಧಿನಿಯಮಗಳಡಿ) ಅನುಮೋದಿಸಲಾದ ಮಧ್ಯಂತರ ಮಹಾಯೋಜನೆ/ಮಹಾಯೋಜನೆಯ ವಲಯ ನಿಯಮಾವಳಿಗಳಲ್ಲಿ ನಿರ್ದಿಷ್ಟಪಡಿಸಲಾದ ಜಾಗದ ಮಾನದಂಡಗಳಿಗೆ ಕಟ್ಟುನಿಟ್ಟಾಗಿ ಹೊಂದುವಂತೆ, ಅಗತ್ಯಗಳಿಗೆ ಅನುಗುಣವಾಗಿ ಎರಡು ಅಥವಾ ಹೆಚ್ಚಿನ ಅಕ್ಕಪಕ್ಕದಲ್ಲಿರುವ ನಾಗರೀಕ ಸೌಕರ್ಯ ನಿವೇಶನಗಳನ್ನು ಒಂದಾಗಿ ಸೇರಿಸಬಹುದು ಮತ್ತು ಒಂದು ನಾಗರೀಕ ಸೌಕರ್ಯ ನಿವೇಶನವನ್ನು ಅನೇಕ ಉಪ-ಭಾಗಗಳನ್ನಾಗಿ ವಿಂಗಡಿಸಬಹುದು.

4. ಸ್ಥಳೀಯ ಯೋಜನಾ ಪ್ರದೇಶದಲ್ಲಿ ನಾಗರೀಕ ಸೌಕರ್ಯ ನಿವೇಶನದ ಹಂಚಿಕೆಗಾಗಿ ಕೋರಿಕೆ ಪತ್ರಗಳನ್ನು ಪಡೆದುಕೊಳ್ಳುವುದು:- (1) ಪ್ರಾಧಿಕಾರವು, ಕೇಂದ್ರ ಅಥವಾ ರಾಜ್ಯ ಸರ್ಕಾರದ ಇಲಾಖೆಗಳು, ಸ್ಥಳೀಯ ಪ್ರಾಧಿಕಾರಗಳು ಮತ್ತು ಸಾರ್ವಜನಿಕ ಸೇವೆಯನ್ನು ಒದಗಿಸುವ ಶಾಸನಬದ್ಧ ಸಂಸ್ಥೆಗಳ ಅಗತ್ಯತೆಯ ಕೋರಿಕೆ ಪಟ್ಟಿಯನ್ನು ಹಾಗೂ ಆಯಾ ಜಿಲ್ಲೆಯ ಸಂಬಂಧಪಟ್ಟ ಜಿಲ್ಲಾಧಿಕಾರಿಗಳಿಂದ ವಾರ್ಷಿಕವಾಗಿ ಎಲ್ಲಿ ಹಂಚಿಕೆಯನ್ನು ಮಾಡಲಾಗಿಲ್ಲವೋ ಅಲ್ಲಿ ಭೂಮಿ ಅಥವಾ ನಾಗರೀಕ ಸೌಕರ್ಯ ನಿವೇಶನದ ಹಂಚಿಕೆಗಾಗಿ ಸ್ವೀಕರಿಸಿದ ಅಗತ್ಯತೆಗಳ ಕೋರಿಕೆ ಪಟ್ಟಿಯನ್ನು ಪಡೆಯತಕ್ಕದ್ದು.

(2) ಪ್ರಾಧಿಕಾರವು, (1)ನೇ ಉಪ-ನಿಯಮದ ಮೇರೆಗೆ ಜಿಲ್ಲಾಧಿಕಾರಿಯು ಒದಗಿಸುವ ಪಟ್ಟಿಯಲ್ಲಿರುವ ಕೇಂದ್ರ ಅಥವಾ ರಾಜ್ಯ ಸರ್ಕಾರದ ಇಲಾಖೆಗಳಿಂದ, ಸ್ಥಳೀಯ ಪ್ರಾಧಿಕಾರ ಮತ್ತು ಶಾಸನಾತ್ಮಕ ಹಾಗೂ ಸ್ಥಳೀಯ ಯೋಜನಾ ಪ್ರದೇಶದಲ್ಲಿನ ಇತರ ಕೇಂದ್ರ ಮತ್ತು ರಾಜ್ಯ ಸರ್ಕಾರಿ ಇಲಾಖೆಗಳಿಂದ, ಸ್ಥಳೀಯ ಪ್ರಾಧಿಕಾರ ಮತ್ತು ಇತರ ಶಾಸನಾತ್ಮಕಗಳಿಂದಲೂ ಸಹ ವಾರ್ಷಿಕವಾಗಿ ಮತ್ತು ನಂತರದ ಐದು ವರ್ಷಗಳಿಗೆ ನಾಗರೀಕ ಸೌಕರ್ಯ ನಿವೇಶನಗಳ ಅಗತ್ಯತೆಗಳ ಬಗ್ಗೆ ಕೋರಿಕೆ ಪತ್ರಗಳನ್ನು ಪಡೆಯತಕ್ಕದ್ದು ಹಾಗೂ ನಿರ್ದಿಷ್ಟಪಡಿಸತಕ್ಕದ್ದು.

(3) ಅಗತ್ಯತೆಗಳ ಮೌಲ್ಯ ನಿರ್ಧರಣೆ:-

(ಎ) ಪ್ರಾಧಿಕಾರವು, (2)ನೇ ಉಪ-ನಿಯಮದ ಮೇರೆಗೆ ಅಗತ್ಯತೆಗಳ ಕೋರಿಕೆ ಪತ್ರವನ್ನು ಪಡೆದಾಗ, ಕೇಂದ್ರ ಅಥವಾ ರಾಜ್ಯ ಸರ್ಕಾರದ ಇಲಾಖೆಗಳು, ಸ್ಥಳೀಯ ಪ್ರಾಧಿಕಾರ ಮತ್ತು ಶಾಸನಾತ್ಮಕಗಳು, 2ನೇ ನಿಯಮದ (1)ನೇ ಉಪ-ನಿಯಮದ (ಸಿ) ಖಂಡದ 1ನೇ ಉಪ ಖಂಡದ (ಎ) ಮತ್ತು (ಬಿ) ಬಾಬಿನ ಮೇರೆಗೆ ನಿರ್ದಿಷ್ಟಪಡಿಸಿದ ಉದ್ದೇಶಗಳಿಗೆ ಸಂಬಂಧಿಸಿದ ಸೌಲಭ್ಯಗಳ ಸಂದರ್ಭದಲ್ಲಿ, ಎಷ್ಟು ವರ್ಷಗಳಿಗೆ ಆ ಸ್ಥಳದಲ್ಲಿ ಅವುಗಳನ್ನು ಒದಗಿಸುವುದು ಕಡ್ಡಾಯವೋ ಮತ್ತು ಎಷ್ಟು ವರ್ಷಗಳವರೆಗೆ ಒದಗಿಸಲು ಉದ್ದೇಶಿಸಲಾಗುತ್ತದೆಯೇ ಅಂಥ ಹದಿನೈದು ವರ್ಷಗಳಿಂದ ಮೂವತ್ತು ವರ್ಷಗಳವರೆಗಿನ ಪರಿಮಿತಿ ಅವಧಿಗಾಗಿ, ಈಗಿನ ಮತ್ತು ಮುಂದಿನ ಅಗತ್ಯತೆಗಳನ್ನು ಪರಿಗಣಿಸಿ, ನಾಗರೀಕ ಸೌಕರ್ಯ ನಿವೇಶನಗಳ ಅವಶ್ಯಕತೆಯನ್ನು ನಿರ್ಧರಿಸತಕ್ಕದ್ದು ಮತ್ತು ಕಾಲಕಾಲಕ್ಕೆ ಸರ್ಕಾರವು ನಿರ್ದಿಷ್ಟಪಡಿಸಿದಂತೆ ಸೇವಾ ಮಟ್ಟದ ಮಾನದಂಡಗಳನ್ನು ಪಾಲಿಸತಕ್ಕದ್ದು;

(ಬಿ) 2ನೇ ನಿಯಮದ (1)ನೇ ಉಪ-ನಿಯಮದ (ಸಿ) ಖಂಡದ (1)ನೇ ಉಪ-ಖಂಡದ (ಎ) ಮತ್ತು (ಬಿ) ಬಾಬಿನ ಮೇರೆಗೆ ನಿರ್ದಿಷ್ಟಪಡಿಸಿದ ಉದ್ದೇಶಗಳಿಗಾಗಿ, ಅಗತ್ಯತೆಗಳನ್ನು ನಿರ್ಧರಿಸುವ ವಿಧಾನವು ಸರ್ಕಾರ ಅಥವಾ ಸಂಬಂಧಪಟ್ಟ ಇಲಾಖೆಯು ಕಾಲಕಾಲಕ್ಕೆ ನಿರ್ದಿಷ್ಟಪಡಿಸಿದಂತೆ ಇರತಕ್ಕದ್ದು.

ಪರಂತು, ಮೇಲಿನ (ಎ) ಖಂಡದಲ್ಲಿ, ಸರ್ಕಾರ ಅಥವಾ ಸಂಬಂಧಪಟ್ಟ ಇಲಾಖೆಯು, ಅಂಥ ನಿರ್ಧರಣೆಗೆ ಸಂಬಂಧಿಸಿದ ವಿಧಾನವನ್ನು ನಿರ್ದಿಷ್ಟಪಡಿಸುವವರೆಗೆ, ಸಂಬಂಧಪಟ್ಟ ಇಲಾಖೆಯ ಸಕ್ಷಮ ಪ್ರಾಧಿಕಾರಿಯು ಇಲಾಖೆಗೆ ಯಾವುದೇ ಸೌಕರ್ಯ ನಿವೇಶನದ ಅಗತ್ಯವಿಲ್ಲವೆಂದು ಹಿಂಬರಹವನ್ನು ನೀಡತಕ್ಕದ್ದಲ್ಲ.

(ಸಿ) ಸರ್ಕಾರದ ಅಥವಾ ಸಂಬಂಧಪಟ್ಟ ಇಲಾಖೆಯು ವಿಹಿತ ಕ್ರಮಗಳನ್ನು ನಿರ್ದಿಷ್ಟಪಡಿಸಿ ಅವುಗಳನ್ನು ಕೇಂದ್ರ ಅಥವಾ ರಾಜ್ಯ ಸರ್ಕಾರಿ ಇಲಾಖೆ, ಸ್ಥಳೀಯ ಪ್ರಾಧಿಕಾರ ಮತ್ತು ಶಾಸನಾತ್ಮಕಗಳಿಗೆ ಲಭ್ಯವಾಗುವಂತೆ ಮಾಡಿದ ತರುವಾಯ, ಪ್ರಾಧಿಕಾರವು ಕೋರಿದ ನಾಗರೀಕ ಸೌಕರ್ಯ ನಿವೇಶನಕ್ಕೆ ಸಂಬಂಧಿಸಿದ ಅಗತ್ಯತೆಗಳ ಪತ್ರಗಳನ್ನು ಈ ನಿಯಮಗಳಲ್ಲಿ ನಿರ್ದಿಷ್ಟಪಡಿಸಿದಂಥ ಅವಶ್ಯಕ ವಿವರಗಳೊಂದಿಗೆ ಕಳುಹಿಸತಕ್ಕದ್ದು; ಮತ್ತು

(ಡಿ) ಕೇಂದ್ರ ಅಥವಾ ರಾಜ್ಯ ಸರ್ಕಾರಿ ಇಲಾಖೆ, ಸ್ಥಳೀಯ ಪ್ರಾಧಿಕಾರ ಮತ್ತು ಶಾಸನಾತ್ಮಕವು, (3)ನೇ ಉಪ-ನಿಯಮದ (ಸಿ) ಖಂಡದ ಮತ್ತು (2)ನೇ ಉಪ-ನಿಯಮದ ಮೇರೆಗೆ ಅವರ ಅಗತ್ಯತೆ ಪತ್ರಗಳನ್ನು ಸಲ್ಲಿಸದಿದ್ದರೆ, ಪ್ರಾಧಿಕಾರವು, ಸಂಬಂಧಪಟ್ಟ ಏಜೆನ್ಸಿಯ ಅಂಥ ಅಗತ್ಯತೆಗಳನ್ನು ಖಚಿತಪಡಿಸಿಕೊಳ್ಳಲು ಜಿಲ್ಲೆಯ ಜಿಲ್ಲಾಧಿಕಾರಿಗೆ ಈ ವಿಷಯದಲ್ಲಿ ಕೋರಿಕೆಯನ್ನು ಸಲ್ಲಿಸತಕ್ಕದ್ದು ಹಾಗೂ ಇದಕ್ಕೆ ಸಂಬಂಧಪಟ್ಟಂತೆ ಜಿಲ್ಲಾಧಿಕಾರಿಯ ತೀರ್ಮಾನವೇ ಅಂತಿಮವಾಗಿರತಕ್ಕದ್ದು.

(4) ಪ್ರಾಧಿಕಾರದ ನಾಗರೀಕ ಸೌಕರ್ಯ ನಿವೇಶನಗಳ ಪ್ರಕಟಣೆ:-

ಹಂಚಿಕೆಗಾಗಿ ಲಭ್ಯವಿರುವ ನಾಗರೀಕ ಸೌಕರ್ಯ ನಿವೇಶನಗಳ ಪಟ್ಟಿಯನ್ನು ಪ್ರಾಧಿಕಾರದ ವೆಬ್‌ಸೈಟ್‌ನಲ್ಲಿ ನಿಯತವಾಗಿ ಅಪ್‌ಲೋಡ್ ಮಾಡತಕ್ಕದ್ದು.

5. ಕೇಂದ್ರ ಅಥವಾ ರಾಜ್ಯ ಸರ್ಕಾರದ ಇಲಾಖೆಗಳು, ಸ್ಥಳೀಯ ಪ್ರಾಧಿಕಾರ ಹಾಗೂ ಶಾಸನಾತ್ಮಕ ನಾಗರೀಕ ಸೌಕರ್ಯ ನಿವೇಶನ ಹಂಚಿಕೆಗಾಗಿ ಒಪ್ಪಿಗೆ:- (1) ಪ್ರಾಧಿಕಾರವು, 2ನೇ ನಿಯಮದ (1)ನೇ ಉಪ-ನಿಯಮದ (ಸಿ) ಖಂಡದ ಮೇರೆಗೆ ಪರಿಭಾಷಿಸಲಾದ ಉದ್ದೇಶಗಳಿಗಾಗಿ ಕ್ರಮಾನುಗತಿಯನ್ನು ಅನುಸರಿಸಿ, ಆದ್ಯತೆಯ ಆಧಾರದ ಮೇಲೆ, ನಾಗರೀಕ ಸೌಕರ್ಯ ನಿವೇಶನಗಳನ್ನು ನೀಡಬಹುದು.

(2) ಯೋಜನಾ ಪ್ರಾಧಿಕಾರವು, ಈ ಕೆಳಗಿನಂತೆ ಕೇಂದ್ರ ಅಥವಾ ರಾಜ್ಯ ಸರ್ಕಾರಕ್ಕೆ, ಸ್ಥಳೀಯ ಪ್ರಾಧಿಕಾರಗಳಿಗೆ ಮತ್ತು ಕೇಂದ್ರ ಹಾಗೂ ರಾಜ್ಯ ಸರ್ಕಾರದ ಅಡಿಯಲ್ಲಿ ಸ್ಥಾಪನೆಯಾಗಿರುವ ಶಾಸನಾತ್ಮಕಗಳಿಗೆ, 2ನೇ ನಿಯಮದ (1)ನೇ ಉಪ-ನಿಯಮದ (ಸಿ) ಖಂಡದ ಮೇರೆಗೆ ಪರಿಭಾಷಿಸಲಾದ ಉದ್ದೇಶಗಳಿಗಾಗಿ ನಾಗರೀಕ ಸೌಕರ್ಯ ನಿವೇಶನಗಳನ್ನು ನೀಡತಕ್ಕದ್ದು ಮತ್ತು ಹಂಚಿಕೆ ಮಾಡತಕ್ಕದ್ದು.

(ಎ) ಪ್ರಾಧಿಕಾರವು, ಯೋಜನಾ ಪ್ರದೇಶದಲ್ಲಿ ಲಭ್ಯವಿರುವ ನಾಗರೀಕ ಸೌಕರ್ಯ ನಿವೇಶನಗಳ ಪೈಕಿ, 2ನೇ ನಿಯಮದ (1)ನೇ ಉಪ-ನಿಯಮದ (ಸಿ) ಖಂಡದ (1)ನೇ ಉಪ-ಖಂಡದ (ಎ) ಬಾಬಿನಲ್ಲಿ ಉಲ್ಲೇಖಿಸಿರುವ ನಾಗರೀಕ ಸೌಕರ್ಯವನ್ನು ಒದಗಿಸುವ ಉದ್ದೇಶಕ್ಕಾಗಿ ಅಷ್ಟು ಸಂಖ್ಯೆಯ ನಿವೇಶನಗಳನ್ನು ಮೀಸಲಿಡತಕ್ಕದ್ದು;

ಪರಂತು, ಪ್ರಾಧಿಕಾರವು, 2ನೇ ನಿಯಮದ (1)ನೇ ಉಪ-ನಿಯಮದ (ಸಿ) ಖಂಡದ (1)ನೇ ಉಪ-ಖಂಡದ (ಎ) ಬಾಬಿನಲ್ಲಿ ಉಲ್ಲೇಖಿಸಿರುವ ಉದ್ದೇಶಗಳಿಗಾಗಿ ಸಾಕಷ್ಟು ಸಂಖ್ಯೆಯ ನಾಗರೀಕ ಸೌಕರ್ಯ ನಿವೇಶನಗಳನ್ನು ಲಭ್ಯವಾಗುವಂತೆ ಮಾಡಲಾಗಿದೆ ಹಾಗೂ 4ನೇ ನಿಯಮದ ಮೇರೆಗೆ ಪಡೆದಿರುವ ಅಗತ್ಯತೆಗಳ ಕೋರಿಕೆಗಳನ್ನು ಪೂರೈಸಲಾಗಿದೆ ಎಂಬುದನ್ನು ಖಚಿತಪಡಿಸಿಕೊಳ್ಳತಕ್ಕದ್ದು;

(ಬಿ) ಪ್ರಾಧಿಕಾರವು, ಮೇಲಿನ (ಎ) ಖಂಡದಲ್ಲಿ ನಮೂದಿಸಿರುವಂತೆ 2ನೇ ನಿಯಮದ (1)ನೇ ಉಪ-ನಿಯಮದ (ಸಿ) ಖಂಡದ (1)ನೇ ಉಪ-ಖಂಡದ (ಎ) ಬಾಬಿನಲ್ಲಿ ಉಲ್ಲೇಖಿಸಿರುವ ಉದ್ದೇಶಗಳಿಗಾಗಿ ಅಗತ್ಯತೆಗಳನ್ನು ಪೂರೈಸಿದ ತರುವಾಯ, 2ನೇ ನಿಯಮದ (1)ನೇ ಉಪ-ನಿಯಮದ (ಸಿ) ಖಂಡದ (1)ನೇ ಉಪ-ಖಂಡದ (ಬಿ) ಬಾಬಿನಲ್ಲಿ ಉಲ್ಲೇಖಿಸಿರುವ ಯಾವುದೇ ಉದ್ದೇಶಗಳನ್ನು ಸ್ಥಳದಲ್ಲಿ ಒದಗಿಸಬೇಕೆಂದು ಅಗತ್ಯಪಡಿಸಲಾದ ನಾಗರೀಕ ಸೌಕರ್ಯ ಉದ್ದೇಶಗಳ ನಿರ್ದಿಷ್ಟ ಸ್ವರೂಪವನ್ನು ಗಮನದಲ್ಲಿಟ್ಟುಕೊಂಡು, ಅಂಥ ಉಳಿದಿರುವ ನಾಗರೀಕ ಸೌಕರ್ಯ ನಿವೇಶನಗಳನ್ನು ಕೇಂದ್ರ ಅಥವಾ ರಾಜ್ಯ ಸರ್ಕಾರಕ್ಕೆ, ಸ್ಥಳೀಯ ಪ್ರಾಧಿಕಾರಗಳಿಗೆ ಮತ್ತು ಶಾಸನಾತ್ಮಕ ನಿಕಾಯಗಳಿಗೆ ನೀಡತಕ್ಕದ್ದು; ಮತ್ತು

(ಸಿ) ಮೇಲಿನ (ಬಿ) ಖಂಡದಲ್ಲಿ ನಮೂದಿಸಿರುವಂತೆ 2ನೇ ನಿಯಮದ (1)ನೇ ಉಪನಿಯಮದ (ಸಿ) ಖಂಡದ (1)ನೇ ಉಪ-ಖಂಡದ (ಬಿ) ಬಾಬಿನಲ್ಲಿ ಉಲ್ಲೇಖಿಸಿರುವ ಉದ್ದೇಶಗಳಿಗಾಗಿ ಅಗತ್ಯತೆಗಳನ್ನು ಪೂರೈಸಿದ ತರುವಾಯ, ಪ್ರಾಧಿಕಾರವು, 2ನೇ ನಿಯಮದ (1)ನೇ ಉಪ-ನಿಯಮದ (ಸಿ) ಖಂಡದ (1)ನೇ ಉಪ-ಖಂಡದ (ಸಿ) ಮತ್ತು (ಡಿ) ಬಾಬಿನ ಮೇರೆಗೆ ಯಾವುದೇ ಸ್ಥಳದಲ್ಲಿ, ಒದಗಿಸಬೇಕೆಂದು ಅಗತ್ಯಪಡಿಸಲಾದ ನಾಗರೀಕ ಸೌಕರ್ಯ ಉದ್ದೇಶಗಳ ನಿರ್ದಿಷ್ಟ ಸ್ವರೂಪವನ್ನು ಗಮನದಲ್ಲಿಟ್ಟುಕೊಂಡು, ಅಂಥ ಉಳಿದಿರುವ ನಾಗರೀಕ ಸೌಕರ್ಯ ನಿವೇಶನಗಳನ್ನು ಕೇಂದ್ರ ಅಥವಾ ರಾಜ್ಯ ಸರ್ಕಾರಕ್ಕೆ, ಸ್ಥಳೀಯ ಪ್ರಾಧಿಕಾರಗಳಿಗೆ ಮತ್ತು ಸಂದರ್ಭಾನುಸಾರ ಶಾಸನಾತ್ಮಕ ನಿಕಾಯಗಳಿಗೆ ಮತ್ತು

ತರುವಾಯ 2ನೇ ನಿಯಮದ (1)ಉಪ-ನಿಯಮದ (ಸಿ) ಖಂಡದ (2)ನೇ ಉಪ-ಖಂಡದ ಮೇರೆಗೆ ಉದ್ದೇಶಕ್ಕಾಗಿ ಸ್ಥಳೀಯ ಪ್ರಾಧಿಕಾರಕ್ಕೆ ಮಾತ್ರ ನಿವೇಶನಗಳನ್ನು ನೀಡತಕ್ಕದ್ದು.

(3) ನಾಗರೀಕ ಸೌಕರ್ಯ ನಿವೇಶನದ ಹಂಚಿಕೆಗಾಗಿ ಹಾಗೂ ಪ್ರಾಧಿಕಾರಕ್ಕೆ ಗುತ್ತಿಗೆ ಹಣದ ಸಂದಾಯ ಮತ್ತು ಗುತ್ತಿಗೆ ನವೀಕರಣಕ್ಕಾಗಿ ಇರುವ ನಿಬಂಧನೆಗಳು ಹಾಗೂ ಷರತ್ತುಗಳು, 14 ಮತ್ತು 15ನೇ ನಿಯಮದ ಅಡಿಯಲ್ಲಿ ನಿರ್ದಿಷ್ಟಪಡಿಸಿರುವಂತೆ ಇರತಕ್ಕದ್ದು.

6. ಸಂಸ್ಥೆಗಳಿಗೆ ನಾಗರೀಕ ಸೌಕರ್ಯ ನಿವೇಶನ ಹಂಚಿಕೆಗಾಗಿ ಒಪ್ಪಿಗೆ:-

(1) 2ನೇ ನಿಯಮದ (1)ನೇ ಉಪ-ನಿಯಮದ (ಸಿ) ಖಂಡದ (1) ಮತ್ತು (2)ನೇ ಉಪ-ಖಂಡದ ಮೇರೆಗಿನ ಉದ್ದೇಶಗಳಿಗಾಗಿ, ಅಗತ್ಯತೆಗಳನ್ನು ಪೂರೈಸಿದ ತರುವಾಯ ಹಾಗೂ ನಾಗರೀಕ ಸೌಕರ್ಯ ನಿವೇಶನಗಳ ಬೇಡಿಕೆಯನ್ನು ಪೂರ್ಣಗೊಳಿಸಿದ ತರುವಾಯ, ಪ್ರಾಧಿಕಾರವು, ಯಾವುದೇ ವಿನ್ಯಾಸದಲ್ಲಿ ಒದಗಿಸಬೇಕೆಂದು ಅಗತ್ಯಪಡಿಸಿರುವ, 2ನೇ ನಿಯಮದ (1)ನೇ ಉಪ-ನಿಯಮದ (ಸಿ) ಖಂಡದ (3)ನೇ ಉಪ-ಖಂಡದ ಮೇರೆಗೆ ನಾಗರೀಕ ಸೌಕರ್ಯ ಉದ್ದೇಶಗಳ ನಿರ್ದಿಷ್ಟ ಸ್ವರೂಪವನ್ನು ಗಮನದಲ್ಲಿಟ್ಟುಕೊಂಡು, ಈ ನಿಯಮಗಳಲ್ಲಿ ನಿರ್ದಿಷ್ಟಪಡಿಸಲಾದಂಥ ಸಂಸ್ಥೆಗೆ ಗುತ್ತಿಗೆ ಆಧಾರದ ಮೇಲೆ ಹಂಚಿಕೆ ಮಾಡುವ ಉದ್ದೇಶಗಳಿಗಾಗಿ, ಅಂಥ ಉಳಿದಿರುವ ನಾಗರೀಕ ಸೌಕರ್ಯನಿವೇಶನಗಳನ್ನು ನೀಡಬಹುದು:

ಪರಂತು, ಪ್ರಾಧಿಕಾರವು, ಒಂದು ಸಂಸ್ಥೆಗೆ, ಸ್ಥಳೀಯ ಯೋಜನಾ ಪ್ರದೇಶದೊಳಗೆ ಲಭ್ಯವಿರುವ ಒಟ್ಟು ನಾಗರೀಕ ಸೌಕರ್ಯ ನಿವೇಶನಗಳಲ್ಲಿ ಶೇಕಡಾ ಹತ್ತನ್ನು ಮೀರದಂತೆ ಅಂಥ ನಿವೇಶನಗಳನ್ನು ನೀಡತಕ್ಕದ್ದು:

ಮತ್ತು ಪರಂತು, ಪ್ರಾಧಿಕಾರವು ಉಳಿದಿರುವ ನಾಗರೀಕ ಸೌಕರ್ಯ ನಿವೇಶನಗಳನ್ನು ನೀಡುವಾಗ, ಅನುಸೂಚಿತ ಜಾತಿಗಳಿಗೆ ಸೇರಿರುವ ವ್ಯಕ್ತಿಗಳ ಅನುಕೂಲಕ್ಕಾಗಿ ಪ್ರತ್ಯೇಕವಾಗಿ ಸ್ಥಾಪಿಸಲಾಗಿರುವ ಸಂಸ್ಥೆಗೆ ಹಾಗೂ ಸಂಸ್ಥೆಯು ಅನುಸೂಚಿತ ಜಾತಿಗೆ ಸೇರಿದ ಬಹು ಸಂಖ್ಯೆಯ ಸದಸ್ಯರನ್ನು ಒಳಗೊಂಡಿದ್ದಲ್ಲಿ ಅಂಥ ಸಂಸ್ಥೆಗೆ ಹಂಚಿಕೆ ಮಾಡುವುದಕ್ಕಾಗಿ, ಅಂಥ ನಿವೇಶನಗಳಲ್ಲಿ ಶೇಕಡಾ ಹದಿನೆಂಟರಷ್ಟನ್ನು ಮತ್ತು ಅನುಸೂಚಿತ ಪಂಗಡಗಳಿಗೆ ಸೇರಿರುವ ವ್ಯಕ್ತಿಗಳ ಅನುಕೂಲಕ್ಕಾಗಿ ಪ್ರತ್ಯೇಕವಾಗಿ ಸ್ಥಾಪಿಸಲಾಗಿರುವ ಸಂಸ್ಥೆಗೆ ಮತ್ತು ಸಂಸ್ಥೆಯು, ಅನುಸೂಚಿತ ಪಂಗಡಕ್ಕೆ ಸೇರಿದ ಬಹುಸಂಖ್ಯೆಯ ಸದಸ್ಯರನ್ನು ಒಳಗೊಂಡಿದ್ದಲ್ಲಿ ಅಂಥ

ಸಂಸ್ಥೆಗೆ ಶೇಕಡಾ ಮೂರರಷ್ಟನ್ನು ಹಾಗೂ ದೈಹಿಕ ಮತ್ತು ಮಾನಸಿಕ ನ್ಯೂನತೆಯನ್ನು ಅಸ್ವಸ್ಥ ವ್ಯಕ್ತಿಗಳ ಅನುಕೂಲಕ್ಕಾಗಿ ಸ್ಥಾಪಿಸಿರುವ ಸಂಸ್ಥೆಗೆ ಅಂಥ ನಿವೇಶನಗಳಲ್ಲಿ ಶೇಕಡಾ ಎರಡರಷ್ಟನ್ನು ಮೀಸಲಿಡತಕ್ಕದ್ದು ಹಾಗೂ ಹಂಚಿಕೆ ಮಾಡತಕ್ಕದ್ದು ಹಾಗೂ ಹಂಚಿಕೆ ಮಾಡುವಾಗ ಅಂಥ ಸಾಕಷ್ಟು ಸಂಖ್ಯೆಯ ಸಂಸ್ಥೆಗಳು ಲಭ್ಯವಿಲ್ಲದಿದ್ದರೆ ಹಾಗೂ ಹಂಚಿಕೆಗಾಗಿ ಅರ್ಜಿ ಸಲ್ಲಿಸದಿದ್ದರೆ, ಹಾಗೆ ಮೀಸಲಿರಿಸಿದ ಉಳಿದ ನಿವೇಶನಗಳನ್ನು ಇತರ ಸಂಸ್ಥೆಗಳಿಗೆ ಹಂಚಿಕೆ ಮಾಡಬಹುದಾಗಿದೆ.

(2) ನಾಗರೀಕ ಸೌಕರ್ಯ ನಿವೇಶನದ ಹಂಚಿಕೆಗಾಗಿ ಹಾಗೂ ಪ್ರಾಧಿಕಾರಕ್ಕೆ ಬಾಡಿಗೆ ಹಣದ ಸಂದಾಯ ಮತ್ತು ನವೀಕರಣಕ್ಕಾಗಿ ಇರುವ ನಿಬಂಧನೆಗಳು ಹಾಗೂ ಷರತ್ತುಗಳು, 14 ಮತ್ತು 15ನೇ ನಿಯಮದಲ್ಲಿ ನಿರ್ದಿಷ್ಟಪಡಿಸಿರುವಂತೆ ಇರತಕ್ಕದ್ದು.

7. ಮೀಸಲಿರಿಸಿದ ನಿವೇಶನಗಳ ವಿಲೇವಾರಿ:- (1) 5 ಮತ್ತು 6ನೇ ನಿಯಮದ ಮೇರೆಗೆ ಕಾಯ್ದಿರಿಸಲಾದ ನಿವೇಶನಗಳನ್ನು, ಅದರಲ್ಲಿ ನಿರ್ದಿಷ್ಟಪಡಿಸಿರುವ ಪ್ರವರ್ಗಗಳಿಗೆ 14ನೇ ನಿಯಮದಲ್ಲಿ ನಿರ್ದಿಷ್ಟಪಡಿಸಬಹುದಾದಂಥ ನಿಬಂಧನೆಗಳು ಮತ್ತು ಷರತ್ತುಗಳಿಗೆ ಒಳಪಟ್ಟು ಹಾಗೂ ಪ್ರಾಧಿಕಾರವು ನಿರ್ದಿಷ್ಟಪಡಿಸಬಹುದಾದಂಥ ಇತರೆ ಷರತ್ತುಗಳಿಗೊಳಪಟ್ಟು ನಾಗರೀಕ ಸೌಕರ್ಯವನ್ನು ಒದಗಿಸುವ ಉದ್ದೇಶಗಳಿಗಾಗಿ ಪ್ರಾಧಿಕಾರವು, ಗುತ್ತಿಗೆ ಆಧಾರದ ಮೇಲೆ ಹಂಚಿಕೆ ಮಾಡತಕ್ಕದ್ದು.

(2) ಪ್ರಾಧಿಕಾರವು, ಅಗತ್ಯಕ್ಕನುಸಾರವಾಗಿ ಮತ್ತು ಹಂಚಿಕೆಯ ಸಮಯದಲ್ಲಿ ಉದ್ಭವಿಸುವ ಪರಿಸ್ಥಿತಿಗನುಸಾರವಾಗಿ ವಿನ್ಯಾಸದಲ್ಲಿನ ನಾಗರೀಕ ಸೌಕರ್ಯ ನಿವೇಶನದ ಉದ್ದೇಶಿತ ಬಳಕೆಯನ್ನು ಬದಲಾಯಿಸುವ ಹಕ್ಕನ್ನು ಹೊಂದಿರುತ್ತದೆ.

8. ನೋಂದಣಿ:- (1) ನಾಗರೀಕ ಸೌಕರ್ಯ ನಿವೇಶನಕ್ಕಾಗಿ ಅರ್ಜಿ ಸಲ್ಲಿಸಿದ ಪ್ರತಿಯೊಂದು ಸಂಸ್ಥೆಯು, ಕೆಳಗಿನ ಕೋಷ್ಟಕದಲ್ಲಿ ಗೊತ್ತುಪಡಿಸಿರುವ ನೋಂದಣಿ ಶುಲ್ಕವನ್ನು ಅಥವಾ ಸರ್ಕಾರವು ಕಾಲಕಾಲಕ್ಕೆ ಪರಿಷ್ಕರಿಸಿದ ಮತ್ತು ಸೂಚಿಸಿದ ದರಗಳನ್ನು ಪ್ರಾಧಿಕಾರಕ್ಕೆ ಸಂದಾಯ ಮಾಡಿ ನೋಂದಣಿ ಮಾಡತಕ್ಕದ್ದು.

ಕೋಷ್ಟಕ

ಕ್ರ.ಸಂ.	**ನಾಗರೀಕ ಸೌಕರ್ಯ ನಿವೇಶನದ ವಿಸ್ತೀರ್ಣ (ಚದರ ಮೀಟರುಗಳಲ್ಲಿ)**	**ಶುಲ್ಕ (ರೂ.ಗಳಲ್ಲಿ)**
1	1000 ಹಾಗೂ 1000 ಕ್ಕಿಂತ ಕಡಿಮೆ	2,000/-
2	1000 ಕ್ಕಿಂತ ಹೆಚ್ಚು ಆದರೆ 2000ಕ್ಕಿಂತ ಕಡಿಮೆ	4,000/-
3	2000 ಕ್ಕಿಂತ ಹೆಚ್ಚು ಆದರೆ 4000 ಕ್ಕಿಂತ ಕಡಿಮೆ	8,000/-
4	4000 ಹಾಗೂ 4000 ಕ್ಕಿಂತ ಹೆಚ್ಚು	15,000/-

(2) ನೋಂದಣಿಯನ್ನು **ನಮೂನೆ-1** ರಲ್ಲಿ ಮಾಡತಕ್ಕದ್ದು.

(3) ಕೇಂದ್ರ ಹಾಗೂ ರಾಜ್ಯ ಸರ್ಕಾರಿ ಇಲಾಖೆ, ಕೇಂದ್ರ ಹಾಗೂ ರಾಜ್ಯ ಸರ್ಕಾರದ ಅಡಿಯಲ್ಲಿ ಸ್ಥಾಪಿಸಲಾಗಿರುವ ಸ್ಥಳೀಯ ಪ್ರಾಧಿಕಾರ ಮತ್ತು ಶಾಸನಾತ್ಮಕ ಈ ನಿಯಮಗಳ ಅಡಿಯಲ್ಲಿ ಮಾಡಲಾದ ಹಂಚಿಕೆಗಾಗಿ ನೋಂದಣಿ ಶುಲ್ಕವನ್ನು ಸಂದಾಯ ಮಾಡುವುದರಿಂದ ವಿನಾಯಿತಿ ಪಡೆದಿವೆ.

(4) ಒಂದಕ್ಕಿಂತ ಹೆಚ್ಚು ನಾಗರೀಕ ಸೌಕರ್ಯ ನಿವೇಶನವನ್ನು ಪಡೆಯಲು ಇಚ್ಛಿಸುವ ಸಂಸ್ಥೆಯು, ತಾನು ಅಪೇಕ್ಷಿಸುವ ಪ್ರತಿಯೊಂದು ನಾಗರೀಕ ಸೌಕರ್ಯ ನಿವೇಶನಕ್ಕಾಗಿ ಪ್ರತ್ಯೇಕವಾಗಿ ನೋಂದಣಿ ಮಾಡತಕ್ಕದ್ದು.

(5) ಸಂಸ್ಥೆಯು ನೋಂದಣಿಯನ್ನು ಹಿಂದಕ್ಕೆ ಪಡೆದ ಹೊರತು, ಒಂದು ಬಾರಿ ಮಾಡಿದ ನೋಂದಣಿಯು, ತರುವಾಯದ ಹಂಚಿಕೆಗೂ ಸಿಂಧುವಾಗಿರತಕ್ಕದ್ದು.

(6) ಸಂಸ್ಥೆಗೆ ನಾಗರೀಕ ಸೌಕರ್ಯ ನಿವೇಶನವು ಹಂಚಿಕೆಯಾದರೆ, ಸಂದಾಯ ಮಾಡಿದ ಶುಲ್ಕವನ್ನು ಮರುಪಾವತಿ ಅಥವಾ ಹೊಂದಾಣಿಕೆ ಮಾಡತಕ್ಕದ್ದಲ್ಲ.

(7) ನಿವೇಶನ ದೊರೆಯದ ಅರ್ಜಿದಾರರಿಗೆ, ನೋಂದಣಿ ಶುಲ್ಕದ ಶೇಕಡಾ ಇಪ್ಪತ್ತೈದರಷ್ಟನ್ನು ಸೇವಾ ವೆಚ್ಚಗಳಿಗಾಗಿ ಮುಟ್ಟುಗೋಲು ಮಾಡಿಕೊಳ್ಳತಕ್ಕದ್ದು ಹಾಗೂ ಉಳಿದ ಮೊಬಲಗನ್ನು, ಅವರು ನೋಂದಣಿಯನ್ನು ಹಿಂಪಡೆಯುವ ಸಂದರ್ಭದಲ್ಲಿ ಮರುಪಾವತಿ ಮಾಡತಕ್ಕದ್ದು.

9. ಅರ್ಜಿ:- (1) ಸಂಸ್ಥೆಗಳಿಗೆ ಗುತ್ತಿಗೆ ಆಧಾರದ ಮೇಲೆ ನೀಡಲಾಗುವ ನಾಗರೀಕ ಸೌಕರ್ಯ ನಿವೇಶನಗಳ ಸಂಬಂಧದಲ್ಲಿ, ಅಂಥ ನಿವೇಶನಗಳು ಇರುವ ಸ್ಥಳ, ಸಂಖ್ಯೆ, ವಿಸ್ತೀರ್ಣ, ಉದ್ದೇಶ ಗುತ್ತಿಗೆ ಹಣ ಮತ್ತು ಅರ್ಜಿಯನ್ನು ಸಲ್ಲಿಸುವ ಕೊನೆಯ ದಿನಾಂಕ ಹಾಗೂ ಪ್ರಾಧಿಕಾರವು

ಅವಶ್ಯಕವೆಂದು ಪರಿಗಣಿಸಬಹುದಾದಂಥ ಇತರ ವಿವರಗಳನ್ನು ಪ್ರಾಧಿಕಾರದ ಕಚೇರಿಯ ನೋಟೀಸ್ ಬೋರ್ಡಿನ ಮೇಲೆ ನೋಟೀಸ್ ಅನ್ನು ಅಂಟಿಸುವುದರ ಮೂಲಕ ಹಾಗೂ ಸ್ಥಳೀಯ ಯೋಜನಾ ಪ್ರದೇಶದಲ್ಲಿ ವ್ಯಾಪಕ ಪ್ರಚಾರದಲ್ಲಿರುವ ಇಂಗ್ಲೀಷ್ ಹಾಗೂ ಕನ್ನಡ ಎರಡು ಭಾಷೆಯಲ್ಲಿ, ಎರಡು ದಿನಪತ್ರಿಕೆಗಳಲ್ಲಿ ಪ್ರಕಟಿಸುವ ಮೂಲಕ ಸೂಕ್ತ ಪ್ರಚಾರ ನೀಡತಕ್ಕದ್ದು.

(2) ಸಂಸ್ಥೆಗಳು, 2ನೇ ನಿಯಮ (1)ನೇ ಉಪ-ನಿಯಮದ (ಎಫ್) ಖಂಡದ ಮೇರೆಗೆ ಪರಿಭಾಷಿಸಿದಂತೆ ಹಾಗೂ 8ನೇ ನಿಯಮದ ಮೇರೆಗೆ ನೋಂದಾಯಿಸಲಾದಂಥ, ಸಂಸ್ಥೆಗಳು, ನಾಗರೀಕ ಸೌಕರ್ಯ ನಿವೇಶನಗಳ ಹಂಚಿಕೆಗಾಗಿ **ನಮೂನೆ – II ರಲ್ಲಿ ಪ್ರಾಧಿಕಾರವು 13ನೇ ನಿಯಮದ ಮೇರೆಗೆ ಗೊತ್ತುಪಡಿಸಿದ ಗುತ್ತಿಗೆ ಹಣವನ್ನು ಸಂದಾಯ ಮಾಡುವುದರೊಂದಿಗೆ** ಅರ್ಜಿಯನ್ನು ಸಲ್ಲಿಸತಕ್ಕದ್ದು.

(3) ಅಂಥ ಅರ್ಜಿಗಳನ್ನು ಸ್ವೀಕರಿಸುವುದಕ್ಕಾಗಿ ಗೊತ್ತುಪಡಿಸಿದ ಕೊನೆಯ ದಿನಾಂಕ ಮತ್ತು ಸಮಯಕ್ಕೆ ಮುಂಚೆ, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರ ಕಛೇರಿಗೆ ತಲುಪುವ ಹಾಗೆ ಅರ್ಜಿಗಳನ್ನು ವೈಯಕ್ತಿಕವಾಗಿ ಸಲ್ಲಿಸತಕ್ಕದ್ದು ಅಥವಾ ನೋಂದಾಯಿತ ಅಂಚೆಯ ಮೂಲಕ ಕಳುಹಿಸತಕ್ಕದ್ದು. ಗೊತ್ತುಪಡಿಸಿದ ಯುಕ್ತ ದಿನಾಂಕ ಮತ್ತು ಸಮಯದ ತರುವಾಯ ಸ್ವೀಕೃತವಾದ, ದೋಷದಿಂದ ಕೂಡಿದ ಮತ್ತು ಸರಿಯಾಗಿಲ್ಲದ ಅರ್ಜಿಗಳನ್ನು ತಿರಸ್ಕೃತಗೊಳಿಸುವುದಕ್ಕೆ ಅರ್ಹವಾಗಿರುತ್ತವೆ.

10. ಅರ್ಹತೆ:- (1) ಪ್ರಾಧಿಕಾರವು **8ನೇ** ನಿಯಮದ ಅಡಿಯಲ್ಲಿ ನೋಂದಾಯಿತವಾದ, 2ನೇ ನಿಯಮದ (1)ನೇ ಉಪ-ನಿಯಮದ (ಎಫ್) ಖಂಡದ ಅಡಿಯಲ್ಲಿ ಪರಿಭಾಷಿಸಿದಂತ ಸಂಸ್ಥೆಗೆ ಮಾತ್ರ ಗುತ್ತಿಗೆ ಆಧಾರದ ಮೇಲೆ ನಾಗರೀಕ ಸೌಕರ್ಯ ನಿವೇಶನಗಳನ್ನು ಹಂಚಿಕೆ ಮಾಡಬಹುದು.

(2) ಅರ್ಜಿಯನ್ನು ಸಲ್ಲಿಸಿದ ದಿನಾಂಕಕ್ಕೆ ಮಂಚೆಯೇ ಎರಡು ಅಥವಾ ಹೆಚ್ಚಿನ ವರ್ಷಗಳ ಮೊದಲೇ ಸಂಬಂಧಪಟ್ಟ ಅಧಿನಿಯಮಗಳ ಅಡಿಯಲ್ಲಿ ನೋಂದಾಯಿಸಲಾಗಿರುವ ಸಂಸ್ಥೆಗಳಿಗೆ ಪ್ರಾಶಸ್ತ್ಯ ನೀಡತಕ್ಕದ್ದು.

(3) ನಾಗರೀಕ ಸೌಕರ್ಯದ ಸ್ವರೂಪದಲ್ಲಿ ನಿವೇಶನವನ್ನು ನೀಡುವುದಕ್ಕಾಗಿ, ಸಂಸ್ಥೆಯು ಅರ್ಹತೆಯನ್ನು ಪಡೆದಿದೆ ಎಂದು ಪ್ರಾಧಿಕಾರಕ್ಕೆ ಮನವರಿಕೆಯಾದ ಹೊರತು, ಯಾವುದೇ ಸಂಸ್ಥೆಗೆ ನಾಗರೀಕ ಸೌಕರ್ಯ ನಿವೇಶನವನ್ನು ಹಂಚಿಕೆ ಮಾಡತಕ್ಕದ್ದಲ್ಲ.

11. ನಾಗರೀಕ ಸೌಕರ್ಯ ನಿವೇಶನಗಳನ್ನು ಗುತ್ತಿಗೆಗೆ ಕೊಡುವುದಕ್ಕಾಗಿ ಸಂಸ್ಥೆಗಳ ಆಯ್ಕೆಯಲ್ಲಿ ಅನುಸರಿಸಬೇಕಾದ ಸೂತ್ರಗಳು:- ಪ್ರಾಧಿಕಾರವು ಪ್ರತಿಯೊಂದು ಸಂಸ್ಥೆಯನ್ನು ಅದರ ಅರ್ಹತೆಗಳ

ಆಧಾರದ ಮೇಲೆ ಪರಿಗಣನೆಗೆ ತೆಗೆದುಕೊಳ್ಳತಕ್ಕದ್ದು ಹಾಗೂ ಆಯ್ಕೆ ಮಾಡುವಾಗ ಈ ಮುಂದಿನ ಮಾನದಂಡಗಳಿಗೆ ವಿಶೇಷ ಗಮನ ನೀಡತಕ್ಕದ್ದು, ಎಂದರೆ.-

(ಎ) ರಾಜ್ಯದಲ್ಲಿ ಸಂಸ್ಥೆಯ ಅಸ್ತಿತ್ವದ ಅವಧಿ ಮತ್ತು ಸಂಬಂಧಪಟ್ಟ ಅಧಿನಿಯಮದಡಿ ಅದರ ನೋಂದಣಿಯಾಗಿರಬೇಕು

(ಬಿ) ಸಂಸ್ಥೆ ಸ್ಥಾಪನೆಯಾದಾಗಿನಿಂದ ಅದರ ಉದ್ದೇಶಗಳು ಮತ್ತು ಚಟುವಟಿಕೆಗಳು ಹಾಗೂ ಅದು ನೀಡಿರುವ ಸಾರ್ವಜನಿಕ ಸೇವೆ;

(ಸಿ) ಸಂಸ್ಥೆಯ ಆರ್ಥಿಕ ಸ್ಥಿತಿಗತಿ;

(ಡಿ) ಅಂಥ ಸಂಸ್ಥೆಗಳಿಗೆ ನಾಗರೀಕ ಸೌಕರ್ಯ ನಿವೇಶನದ ಹಂಚಿಕೆಯಿಂದ ಸ್ಥಳೀಯ ಸಾರ್ವಜನಿಕರಿಗೆ ಉಂಟಾಗಬಹುದಾದ ಅನುಕೂಲ;

(ಇ) ವಾರ್ಷಿಕ ವರದಿಗಳು, ಲೆಕ್ಕ ಪರಿಶೋಧನಾ ವರದಿಗಳಿಂದ ತಿಳಿದುಬರುವಂತೆ

ಸಂಸ್ಥೆಯ ಪ್ರಾಮಾಣಿಕತೆ ಹಾಗೂ ನೈಜತೆ;

(ಎಫ್) ಸಂಸ್ಥೆಯು ಈಗಿರುವ ಸ್ಥಳ;

(ಜಿ) ಆ ಸ್ಥಳದಲ್ಲಿ ನಾಗರೀಕ ಸೌಕರ್ಯವನ್ನು ಒದಗಿಸುವುದಕ್ಕಾಗಿ ಆ ಸಂಸ್ಥೆಗೆ ನಾಗರೀಕ ಸೌಕರ್ಯ ನಿವೇಶನದ ಅಗತ್ಯತೆ; ಮತ್ತು

(ಹೆಚ್) ಸಂಸ್ಥೆಯು, 13ನೇ ನಿಯಮದ ಅಡಿಯಲ್ಲಿ, ನಿರ್ದಿಷ್ಟಪಡಿಸಲಾದಂತೆ ಗುತ್ತಿಗೆ ಹಣದಲ್ಲಿ ಯಾವುದೇ ವಿನಾಯಿತಿಯನ್ನು ಮಾಡತಕ್ಕದ್ದಲ್ಲ ಹಾಗೂ ಸಂಸ್ಥೆಯು,ಈ ಸಂಬಂಧದಲ್ಲಿ ಒಂದು ಅಫಿಡಾವಿಟ್ ಅನ್ನು ಅರ್ಜಿಯೊಂದಿಗೆ ಲಗತ್ತಿಸಿರತಕ್ಕದ್ದು.

12. ಒಂದೇ ಸ್ವರೂಪದ ಅಗತ್ಯತೆಗಳ ಸಂದರ್ಭದಲ್ಲಿ ಹಂಚಿಕೆಗಾಗಿ ಪ್ರಕ್ರಿಯೆ:- (1) 2ನೇ ನಿಯಮದ (1)ನೇ ಉಪನಿಯಮದಲ್ಲಿ ಪರಿಭಾಷಿಸಿದಂತೆ ಸರ್ಕಾರಿ ಇಲಾಖೆಗಳು, ಸ್ಥಳೀಯ ಪ್ರಾಧಿಕಾರ, ಶಾಸನಾತ್ಮಕ ನಿಕಾಯಗಳು ಅಥವಾ ಸಂಸ್ಥೆಗಳಿಂದ ನಾಗರೀಕ ಸೌಕರ್ಯ ನಿವೇಶನದ ಹಂಚಿಕೆಗಾಗಿ ತಮ್ಮ ಪ್ರವರ್ಗದೊಳಗೆ ಒಂದಕ್ಕಿಂತ ಹೆಚ್ಚಿನ ಕೋರಿಕೆಗಳು ಇದ್ದಲ್ಲಿ ಮತ್ತು ಈ ನಿಯಮಗಳಲ್ಲಿ ನಿರ್ದಿಷ್ಟಪಡಿಸಲಾದಂತೆ ಹಂಚಿಕೆಗೆ ಸಂಬಂಧಿಸಿದ ಎಲ್ಲ ಮಾನದಂಡಗಳನ್ನು ಅನುಸರಿಸಿದ್ದಲ್ಲಿ, ಪ್ರಾಧಿಕಾರ ಅಥವಾ ಈ ಸಂಬಂಧದಲ್ಲಿ ಪ್ರಾಧಿಕಾರದಿಂದ ಅಧಿಕೃತನಾದ ಯಾರೇ ಅಧಿಕಾರಿಯು, ಎಲ್ಲಾ ಅರ್ಜಿದಾರರ ಸಮ್ಮುಖದಲ್ಲಿ ಒಂದೇ ಪ್ರವರ್ಗದ ಅರ್ಜಿಗಳ ಪೈಕಿ, ಲಾಟರಿ ಎತ್ತುವ ಮೂಲಕ ಹಂಚಿಕೆ ಮಾಡತಕ್ಕದ್ದು, ಲಾಟರಿ ಎತ್ತುವ ವಿಧಾನವು, ಪ್ರಾಧಿಕಾರಿಯು ನಿರ್ಧರಿಸಿದಂತೆ ಇರತಕ್ಕದ್ದು.

(2) ಪ್ರಾಧಿಕಾರದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯು, ಒಂದೇ ಪ್ರವರ್ಗದೊಳಗಿರುವ ಎಲ್ಲಾ ಅರ್ಹ ಅರ್ಜಿದಾರರ ಪೈಕಿ ಲಾಟರಿ ಎತ್ತುವುದಕ್ಕಾಗಿ ವ್ಯವಸ್ಥೆಯನ್ನು ಮಾಡತಕ್ಕದ್ದು. ಹಂಚಿಕೆಗೆ ಸಂಬಂಧಿಸಿದ ಮಾನದಂಡಗಳನ್ನು ಪೂರೈಸಿರುವ ಎಲ್ಲಾ ಅರ್ಜಿದಾರರಿಗೂ ಲಾಟರಿ ಎತ್ತುವ ದಿನಾಂಕ, ಸಮಯ ಹಾಗೂ ಸ್ಥಳವನ್ನು ಗೊತ್ತುಪಡಿಸಿ ಏಳು ದಿನಗಳಿಗೆ ಕಡಿಮೆ ಇಲ್ಲದಂತೆ ಅವರಿಗೆ ನೋಟೀಸನ್ನು ಹೊರಡಿಸತಕ್ಕದ್ದು.

13. ನಿವೇಶನದ ಗುತ್ತಿಗೆಯ ಹಣ:- (1) ಗುತ್ತಿಗೆ ಆಧಾರದ ಮೇಲೆ ಹಂಚಿಕೆ ಮಾಡಬೇಕಾದ ನಿವೇಶನದ ಗುತ್ತಿಗೆಯ ಹಣವನ್ನು ಪ್ರಾಧಿಕಾರವು ನಿಗದಿಪಡಿಸತಕ್ಕದ್ದು. ಪರಂತು, ನಾಗರೀಕ ಸೌಕರ್ಯ ನಿವೇಶನದ ಪ್ರತಿ ಚದರ ಮೀಟರ್‌ನ ಮೌಲ್ಯವನ್ನು, ವಿನ್ಯಾಸದ ವಸತಿ ನಿವೇಶನದ ಪ್ರತಿ ಚದರ ಮೀಟರ್‌ನ ಮಾರುಕಟ್ಟೆ ಮೌಲ್ಯಕ್ಕಿಂತ ಕಡಿಮೆ ಇರದಂತೆ ನಿಗದಿಪಡಿಸತಕ್ಕದ್ದು.

(2) **ಕೇಂದ್ರ ಅಥವಾ ರಾಜ್ಯ ಸರ್ಕಾರದ ಇಲಾಖೆ, ಸ್ಥಳೀಯ ಪ್ರಾಧಿಕಾರ ಅಥವಾ ಶಾಸನಾತ್ಮಕ ನಿಕಾಯಗಳು** ಗುತ್ತಿಗೆಯ ಅವಧಿಯಲ್ಲಿ ಪ್ರಾಧಿಕಾರದ ಪೂರ್ವಾನುಮೋದನೆಯೊಂದಿಗೆ, ಭಾರತೀಯ ಸ್ಟೇಟ್ ಬ್ಯಾಂಕ್‌ನ ಮೂಲ ಸಾಲ ನೀಡಿಕೆ ದರದಲ್ಲಿ ಬಡ್ಡಿಯನ್ನು ವಸೂಲು ಮಾಡುವುದಕ್ಕೆ ಒಳಪಟ್ಟು ಐದು ವಾರ್ಷಿಕ ಕಂತುಗಳನ್ನು ಗುತ್ತಿಗೆ ಹಣವನ್ನು ಪಾವತಿಸಬಹುದು.

(3) ಅರ್ಜಿಗಳನ್ನು ಆಹ್ವಾನಿಸುವಾಗ, ಅಧಿಸೂಚಿಸಿರುವ ನಾಗರೀಕ ಸೌಕರ್ಯ ನಿವೇಶನದ ಗುತ್ತಿಗೆ ಹಣವನ್ನು ಪ್ರಾಧಿಕಾರವು ಮಾರ್ಪಾಡು ಮಾಡಬಹುದು ಮತ್ತು ಸಂಸ್ಥೆಗಳು ಹಾಗೆ ಮಾರ್ಪಡಿಸಿದ ದರದಲ್ಲಿ ನಿವೇಶನವನ್ನು ಒಪ್ಪಿಕೊಳ್ಳಬಹುದು ಅಥವಾ ಹಂಚಿಕೆಯನ್ನು ನಿರಾಕರಿಸಬಹುದು.

(4) ಈ ಮುಂದಿನ ಸಂದರ್ಭದಲ್ಲಿ ಮಾತ್ರ, ಪ್ರಾಧಿಕಾರವು ನಿಗದಿಪಡಿಸಿದ ಗುತ್ತಿಗೆ ಹಣದ ಶೇಕಡಾ ಐವತ್ತರಷ್ಟನ್ನು ಪಡೆದು ಹಂಚಿಕೆ ಮಾಡತಕ್ಕದ್ದು, ಎಂದರೆ.-

(ಎ) ದೈಹಿಕ ವಿಕಲಚೇತನರು ಮತ್ತು ಮಾನಸಿಕ ಅಸ್ವಸ್ಥರ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ಕಲ್ಯಾಣಕ್ಕಾಗಿ ಸ್ಥಾಪಿಸಿದ ಸಂಸ್ಥೆಗಳು;

(ಬಿ) ಸರ್ಕಾರದಿಂದ ಅನುಮೋದನೆಗೊಂಡ ಕನ್ನಡ ಮಾಧ್ಯಮದಲ್ಲಿ ಮಾತ್ರ ನಡೆಯುತ್ತಿರುವ ಶೈಕ್ಷಣಿಕ ಸಂಸ್ಥೆ; ಮತ್ತು

(ಸಿ) 2ನೇ ನಿಯಮದ (1)ನೇ ಉಪ-ನಿಯಮದ (ಸಿ) ಖಂಡದ (1)ನೇ ಉಪ-ಖಂಡದ (ಎ) ಬಾಬಿನ ಅಡಿಯಲ್ಲಿ ಪಟ್ಟಿ ಮಾಡಿರುವ ಉದ್ದೇಶಗಳಿಗಾಗಿ ಸೌಕರ್ಯಗಳನ್ನು ಒದಗಿಸುವ ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರದ ಇಲಾಖೆಗಳು, ಸ್ಥಳೀಯ ಪ್ರಾಧಿಕಾರ ಮತ್ತು ಶಾಸನಾತ್ಮಕ ನಿಕಾಯಗಳು.

14. ನಾಗರೀಕ ಸೌಕರ್ಯ ನಿವೇಶನಗಳ ಹಂಚಿಕೆಯ ಷರತ್ತುಗಳು:-

(ಎ) ಕೇಂದ್ರ/ರಾಜ್ಯ ಸರ್ಕಾರ, ಸ್ಥಳೀಯ ಪ್ರಾಧಿಕಾರ, ಶಾಸನಾತ್ಮಕ ನಿಕಾಯಗಳಿಗಾಗಿ:-

(1) ಪ್ರಾಧಿಕಾರದ ಪೂರ್ವಾನುಮೋದನೆಯೊಂದಿಗೆ, ಭಾರತೀಯ ಸ್ಟೇಟ್ ಬ್ಯಾಂಕ್ (ಎಸ್‌ಬಿಐ)ನ ಮೂಲ ಸಾಲ ನೀಡಿಕೆ ದರದಲ್ಲಿ, ಬಡ್ಡಿಯನ್ನು ವಸೂಲು ಮಾಡುವುದಕ್ಕೆ ಒಳಪಟ್ಟು, ಗುತ್ತಿಗೆಯ ಅವಧಿಯಲ್ಲಿ ಐದು (5) ವಾರ್ಷಿಕ ಕಂತುಗಳಲ್ಲಿ ಗುತ್ತಿಗೆ ಹಣವನ್ನು ಪಾವತಿಸಬಹುದು.

(2) ನಾಗರೀಕ ಸೌಕರ್ಯ ನಿವೇಶನಗಳನ್ನು ಹಂಚಿಕೆ ಮಾಡಿರುವ (ಇದರಲ್ಲಿ ಇನ್ನು ಮುಂದೆ "ಹಂಚಿಕೆ ಪಡೆದವನು" ಎಂದು ಉಲ್ಲೇಖಿಸಲಾಗಿದೆ), ಕೇಂದ್ರ/ರಾಜ್ಯ ಸರ್ಕಾರ, ಸ್ಥಳೀಯ ಪ್ರಾಧಿಕಾರ, ಶಾಸನಾತ್ಮಕ ನಿಕಾಯಗಳು, ಹಂಚಿಕೆ ನೋಟೀಸ್ ಅನ್ನು ಸ್ವೀಕರಿಸಿದ ತೊಂಬತ್ತು ದಿನಗಳೊಳಗಾಗಿ, ಗುತ್ತಿಗೆ ಹಣದ ಬಾಕಿಯನ್ನು ಒಂದೇ ಮೊತ್ತದಲ್ಲಾಗಲೀ ಅಥವಾ ಗುತ್ತಿಗೆ ಹಣದ ಮೊದಲ ವಾರ್ಷಿಕ ಕಂತನ್ನು ಪ್ರಾಧಿಕಾರಕ್ಕೆ ಸಂದಾಯ ಮಾಡತಕ್ಕದ್ದು.

(3) ಗುತ್ತಿಗೆಯ ಹಣ ಅಥವಾ ವಾರ್ಷಿಕ ಕಂತನ್ನು, ಹಂಚಿಕೆ ಪಡೆದವನು ತೊಂಬತ್ತು ದಿನಗಳೊಳಗಾಗಿ ಸಂದಾಯ ಮಾಡದಿದ್ದರೆ, ನಂತರ ವಿಸ್ತರಿತ ಅವಧಿಯನ್ನು ಅರವತ್ತು ದಿನಗಳಿಗೆ ಮೀರದಂತೆ ನೀಡಬಹುದು ಹಾಗೂ ಹಂಚಿಕೆ ಪಡೆದವನು, ವಿಸ್ತರಿಸಲಾದ ಅವಧಿಗಾಗಿ ಭಾರತೀಯ ಸ್ಟೇಟ್ ಬ್ಯಾಂಕ್‌ನ ಮೂಲ ಸಾಲ ನೀಡಿಕೆ ದರದಲ್ಲಿ ಬಡ್ಡಿಯನ್ನು ಹೆಚ್ಚುವರಿಯಾಗಿ ಸಂದಾಯ ಮಾಡತಕ್ಕದ್ದು. ಗುತ್ತಿಗೆ ಹಣ ಅಥವಾ ಕಂತನ್ನು, ಅಂಥ ವಿಸ್ತರಿತ ಅವಧಿಯೊಳಗಾಗಿ ಸಂದಾಯ ಮಾಡದಿದ್ದರೆ, ಹಂಚಿಕೆ ಪಡೆದವನ ಹಂಚಿಕೆಯನ್ನು ರದ್ದುಪಡಿಸತಕ್ಕದ್ದು.

(4) ವಾರ್ಷಿಕ ಕಂತನ್ನು, 13ನೇ ನಿಯಮದ ಅನುಸಾರ ಹಾಗೂ 14.ಸಿ ನಿಯಮದ (2)ನೇ ಉಪ-ನಿಯಮದ ಅಡಿಯಲ್ಲಿ ಮಾಡಿಕೊಳ್ಳಲಾದ ಗುತ್ತಿಗೆ ಒಪ್ಪಂದದ ನಿಬಂಧನೆಗಳು ಹಾಗೂ ಷರತ್ತುಗಳ ಅನುಸಾರ ಸಂದಾಯ ಮಾಡತಕ್ಕದ್ದು.

ಬಿ. ಸಂಸ್ಥೆಗಳು:-

(1) **9(2)** ನೇ ನಿಯಮದ ಅಡಿಯಲ್ಲಿ ನಾಗರೀಕ ಸೌಕರ್ಯ ನಿವೇಶನದ ಹಂಚಿಕೆಗಾಗಿ ಅರ್ಜಿಯನ್ನು ಸ್ವೀಕರಿಸಿದ ತರುವಾಯ ಮತ್ತು ಈ ನಿಯಮಗಳಲ್ಲಿ ನಿರ್ದಿಷ್ಟಪಡಿಸಿರುವ ಯುಕ್ತ ಪ್ರಕ್ರಿಯೆಯನ್ನು ಅನುಸರಿಸಿದ ತರುವಾಯ, ಪ್ರಾಧಿಕಾರವು, ನಾಗರೀಕ ಸೌಕರ್ಯ ನಿವೇಶನವನ್ನು ಹಂಚಿಕೆ ಮಾಡುವುದಕ್ಕೆ ತೀರ್ಮಾನ ಮಾಡಿದ ತರುವಾಯ, ಯಶಸ್ವಿಯಾಗದ ಅರ್ಜಿದಾರರ ಗುತ್ತಿಗೆ ಹಣವನ್ನು ಹಂಚಿಕೆಯ ತೀರ್ಮಾನದ **ಮೂರು** ದಿನಗಳೊಳಗಾಗಿ ಮರುಪಾವತಿ ಮಾಡತಕ್ಕದ್ದು.

ಸಿ. ಸಾಮಾನ್ಯ ಷರತ್ತುಗಳು:-

(1) ಈ ನಿಯಮಗಳ ಮೇರೆಗೆ ನಾಗರೀಕ ಸೌಕರ್ಯ ನಿವೇಶನಗಳ ಹಂಚಿಕೆಯು ಮೂವತ್ತು ವರ್ಷಗಳನ್ನು ಮೀರಿದ ಅವಧಿಗಾಗಿ ಷರತ್ತುಪೂರ್ವಕ ಗುತ್ತಿಗೆ ಆಧಾರದ ಮೇಲೆ ಮಾಡತಕ್ಕದ್ದು.

(2) ಈ ನಿಯಮಗಳಲ್ಲಿ ನಿರ್ದಿಷ್ಟಪಡಿಸಿರುವಂತೆ ಗುತ್ತಿಗೆ ಹಣವನ್ನು ಸಂದಾಯ ಮಾಡಿದ ತರುವಾಯ, ಮತ್ತು ಪ್ರಾಧಿಕಾರವು ನಿವೇಶನ ಹಂಚಿಕೆಗೆ ತೀರ್ಮಾನವನ್ನು ಮಾಡಿದ ತರುವಾಯ, ಪ್ರಾಧಿಕಾರವು, **ನಮೂನೆ-III ರಲ್ಲಿ ನಿರ್ದಿಷ್ಟಪಡಿಸಲಾದಂಥ ನಿಬಂಧನೆಗಳು ಹಾಗೂ ಷರತ್ತುಗಳೊಂದಿಗೆ** ಕರಾರು ಒಪ್ಪಂದವನ್ನು ಮಾಡಿಕೊಳ್ಳಲು, ಹಂಚಿಕೆ ಪಡೆದವರಿಗೆ ಆಹ್ವಾನಿಸತಕ್ಕದ್ದು ಹಾಗೂ ಹಂಚಿಕೆ ಪಡೆದವರು ಮತ್ತು ಪ್ರಾಧಿಕಾರವು ಅಂಥ ಒಪ್ಪಂದವನ್ನು ಮಾಡಿಕೊಂಡ ತರುವಾಯ, ಹಂಚಿಕೆ ಪಡೆದವರು ಅದನ್ನು ನೋಂದಣಿ ಮಾಡತಕ್ಕದ್ದು. ಅಂಥ ಒಪ್ಪಂದವನ್ನು ಮಾಡಿಕೊಳ್ಳುವುದಕ್ಕೆ ಪ್ರಾಧಿಕಾರವು ಹಂಚಿಕೆ ಪಡೆದವರನ್ನು ಆಹ್ವಾನಿಸಿದ ನಲವತ್ತೈದು ದಿನಗಳೊಳಗಾಗಿ ಒಪ್ಪಂದವನ್ನು ಮಾಡಿಕೊಳ್ಳದಿದ್ದರೆ ಅಥವಾ ಅದನ್ನು ನೋಂದಣಿ ಮಾಡಿಕೊಳ್ಳದಿದ್ದರೆ, ಸಂದರ್ಭಾನುಸಾರ, ನೋಂದಣಿ ಶುಲ್ಕವನ್ನು ಮುಟ್ಟುಗೋಲು ಹಾಕಿಕೊಳ್ಳತಕ್ಕದ್ದು ಮತ್ತು ನಿವೇಶನದ ಹಂಚಿಕೆಯನ್ನು ರದ್ದುಪಡಿಸತಕ್ಕದ್ದು. ಗುತ್ತಿಗೆ ಹಣಕ್ಕಾಗಿ ಹಂಚಿಕೆ ಪಡೆದವರು ಸಂದಾಯ ಮಾಡಿದ ಹಣವನ್ನು, ಪ್ರಾಧಿಕಾರವು ಭರಿಸಬಹುದಾಗಿದ್ದಂತಹ ವೆಚ್ಚವನ್ನು ಕಳೆದ ತರುವಾಯ ಮರುಸಂದಾಯ ಮಾಡತಕ್ಕದ್ದು.

(3) ಸಾಧ್ಯವಾದಷ್ಟು ಬೇಗನೆ, ಆದರೆ ಮೂವತ್ತು ದಿನಗಳಿಗಿಂತ ತಡವಾಗದಂತೆ ನೋಂದಾಯಿತ ಒಪ್ಪಂದ ಪತ್ರವನ್ನು ಪ್ರಾಧಿಕಾರಕ್ಕೆ ಸಲ್ಲಿಸಿದ ನಂತರ, ನಿವೇಶನದ ಸ್ವಾಧೀನವನ್ನು ಗುತ್ತಿಗೆದಾರನಿಗೆ ಹಸ್ತಾಂತರಿಸತಕ್ಕದ್ದು.

(4) ಗುತ್ತಿಗೆಯ ಅವಧಿಯು, ಗುತ್ತಿಗೆ ಒಪ್ಪಂದವನ್ನು ನೋಂದಣಿ ಮಾಡಿದ ದಿನಾಂಕದಿಂದ ಪ್ರಾರಂಭವಾಗತಕ್ಕದ್ದು.

(5) ಗುತ್ತಿಗೆದಾರನು, ಗುತ್ತಿಗೆ ಒಪ್ಪಂದದ ನೋಂದಣಿ ದಿನಾಂಕದಿಂದ 3 ವರ್ಷಗಳ ಅವಧಿಯೊಳಗೆ ಕಟ್ಟಡ ನಿರ್ಮಾಣವನ್ನು ಪೂರ್ಣಗೊಳಿಸತಕ್ಕದ್ದು. ಪರಂತು, ಪೂರ್ಣಗೊಳಿಸುವ ಒಟ್ಟು ಅವಧಿಯು, ಪ್ರಾಧಿಕಾರವು, ಯಾವುದೇ ನಿರ್ದಿಷ್ಟ ಪ್ರಕರಣದಲ್ಲಿ ಲಿಖಿತ ಆದೇಶದ ಮೂಲಕ ಅನುಮತಿಸಬಹುದಾದಂತೆ ವಿಸ್ತರಿತ ಅವಧಿಯು 10 ವರ್ಷಗಳನ್ನು ಮೀರತಕ್ಕದ್ದಲ್ಲ. ಕಟ್ಟಡವು ಸದರಿ ಅವಧಿಯೊಳಗಾಗಿ ನಿರ್ಮಾಣವಾಗದಿದ್ದರೆ, ಗುತ್ತಿಗೆ ಪಡೆದವನಿಗೆ ಸೂಕ್ತ ನೋಟಿಸ್ ನೀಡಿದ ತರುವಾಯ, ಪ್ರಾಧಿಕಾರವು ಹಂಚಿಕೆಯನ್ನು ರದ್ದುಪಡಿಸಬಹುದು/ ಒಪ್ಪಂದವನ್ನು ರದ್ದುಪಡಿಸಬಹುದು ಮತ್ತು ಗುತ್ತಿಗೆದಾರನನ್ನು ನಿವೇಶನದಿಂದ ತೆರವುಗೊಳಿಸಬಹುದು ಹಾಗೂ ಹಂಚಿಕೆ ಪಡೆದವನು ಸಂದಾಯ ಮಾಡಿದ ಗುತ್ತಿಗೆ ಹಣದ ಶೇಕಡಾ ಇಪ್ಪತ್ತೈದರಷ್ಟನ್ನು (25%) ಮುಟ್ಟುಗೋಲು ಹಾಕಿಕೊಂಡ ತರುವಾಯ, ಪ್ರಾಧಿಕಾರವು, ಬಾಕಿ ಹಣವನ್ನು ಹಂಚಿಕೆ ಪಡೆದವನಿಗೆ ಮರು ಸಂದಾಯ ಮಾಡಬಹುದು.

(6) ಗುತ್ತಿಗೆದಾರನು, ಸಂಬಂಧಪಟ್ಟ ಸ್ಥಳೀಯ ಪ್ರಾಧಿಕಾರದಿಂದ ಲೈಸೆನ್ಸ್ ಅನ್ನು ಪಡೆಯುವುದಕ್ಕೆ ಮುಂಚೆ ನಾಗರೀಕ ಸೌಕರ್ಯ ನಿವೇಶನದಲ್ಲಿ ಕಟ್ಟಡ ನಿರ್ಮಾಣ ಮಾಡುವುದಕ್ಕಾಗಿ ಪ್ರಾಧಿಕಾರದಿಂದ ಅನುಮೋದನೆಯನ್ನು ಪಡೆಯತಕ್ಕದ್ದು.

(7) ಗುತ್ತಿಗೆದಾರನು, ನಿವೇಶನದ ಸ್ವಾಧೀನವನ್ನು ತೆಗೆದುಕೊಂಡ ದಿನಾಂಕದಿಂದ ಜಾರಿಗೆ ಬರುವಂತೆ ನಾಗರೀಕ ಸೌಕರ್ಯ ನಿವೇಶನದ ಹಾಗೂ ಅದರ ಮೇಲೆ ನಿರ್ಮಿಸಿದ ಯಾವುದೇ ಕಟ್ಟಡದ ಸಂಬಂಧದಲ್ಲಿ, ಸಂಬಂಧಪಟ್ಟ ಸ್ಥಳೀಯ ಪ್ರಾಧಿಕಾರಕ್ಕೆ ಸಂದಾಯ ಮಾಡಬೇಕಾದ ಯಾವುದೇ ತೆರಿಗೆ, ಶುಲ್ಕ ಮತ್ತು ಉಪಕರವನ್ನು ಸಂದಾಯ ಮಾಡಲು ಹೊಣೆಗಾರನಾಗಿರತಕ್ಕದ್ದು.

(8) ಗುತ್ತಿಗೆದಾರನು ಗುತ್ತಿಗೆ ಅವಧಿಯಲ್ಲಿ ಹಂಚಿಕೆಯಾದ ನಿವೇಶನಕ್ಕೆ ಮಾಲೀಕನಾಗತಕ್ಕದ್ದಲ್ಲ ಅಥವಾ ನಿವೇಶನದ ಯಾವುದೇ ಸ್ವಾಮ್ಯತೆಯನ್ನು ಪಡೆಯತಕ್ಕದ್ದಲ್ಲ.

(9) ಗುತ್ತಿಗೆದಾರನು, ನಾಗರೀಕ ಸೌಕರ್ಯ ನಿವೇಶನವನ್ನು ಉಪವಿಭಾಗ ಮಾಡತಕ್ಕದ್ದಲ್ಲ ಅಥವಾ ಉಪ-ಗುತ್ತಿಗೆ ನೀಡತಕ್ಕದ್ದಲ್ಲ. ಅಥವಾ ಪರಭಾರೆ ಮಾಡತಕ್ಕದ್ದಲ್ಲ, ಅಥವಾ ಯಾವುದೇ ಶುಲ್ಕವನ್ನು ಹೊರಿಸತಕ್ಕದ್ದಲ್ಲ.

(10) ಗುತ್ತಿಗೆದಾರನು, ನಾಗರೀಕ ಸೌಕರ್ಯ ನಿವೇಶನವನ್ನು ಯಾವ ಉದ್ದೇಶಕ್ಕಾಗಿ ಹಂಚಿಕೆ ಮಾಡಲಾಗಿದೆಯೋ ಆ ಉದ್ದೇಶಕ್ಕಾಗಿ ಮಾತ್ರ ನಿವೇಶನವನ್ನು ಪ್ರತ್ಯೇಕವಾಗಿ ಬಳಸತಕ್ಕದ್ದು.

(11) ಗುತ್ತಿಗೆದಾರನು, ಮಾಡಿಕೊಂಡ ಒಪ್ಪಂದದ ನಿಬಂಧನೆಗಳು ಹಾಗೂ ಷರತ್ತುಗಳನ್ನು ಮತ್ತು ಪ್ರಾಧಿಕಾರ, ಮುನ್ಸಿಪಲ್ ಕೌನ್ಸಿಲ್‌ನ ಅಥವಾ ಪಟ್ಟಣ ಮುನ್ಸಿಪಲ್ ಕೌನ್ಸಿಲ್‌ನ ಅಥವಾ ಪಟ್ಟಣ ಪಂಚಾಯತಿ ಅಥವಾ ಸಂದರ್ಭಾನುಸಾರ ತತ್ಕಾಲದಲ್ಲಿ ಜಾರಿಯಲ್ಲಿರುವ **ಯಾವುದೇ ಸ್ಥಳೀಯ ಪ್ರಾಧಿಕಾರದ** ಇತರ ನಿಯಮಗಳು, ವಿನಿಯಮಗಳು ಮತ್ತು ಉಪವಿಧಿಗಳನ್ನು ಪಾಲಿಸತಕ್ಕದ್ದು.

15. ಗುತ್ತಿಗೆ ಒಪ್ಪಂದ ಪತ್ರದ ನವೀಕರಣ:- (1) ಗುತ್ತಿಗೆ ಒಪ್ಪಂದ ಪತ್ರವನ್ನು 13ನೇ ನಿಯಮದ ಅನುಸಾರವಾಗಿ ಮತ್ತು ಈ ನಿಯಮಗಳಲ್ಲಿ ನಿರ್ದಿಷ್ಟಪಡಿಸಲಾದಂತೆ, ಗುತ್ತಿಗೆ ಹಣವನ್ನು ಮರು ನಿಗದಿಪಡಿಸುವ ಮೂಲಕ ಮುಂದಿನ ಮೂವತ್ತು ವರ್ಷಗಳಿಗೆ ಗುತ್ತಿಗೆದಾರನ ಪರವಾಗಿ ನವೀಕರಿಸಬಹುದು. ಪರಂತು, ಗುತ್ತಿಗೆ ಒಪ್ಪಂದ ಪತ್ರದ ನವೀಕರಣದ ಸಂದರ್ಭದಲ್ಲಿ ಗುತ್ತಿಗೆದಾರನು, ಹಿಂದಿನ ಗುತ್ತಿಗೆ ಅವಧಿಯ ಸಮಯದ ಯಾವುದೇ ಹಂತದಲ್ಲಿ ಈ ನಿಯಮಗಳಲ್ಲಿ ನಿರ್ದಿಷ್ಟಪಡಿಸುವ ಯಾವುದೇ ಷರತ್ತುಗಳನ್ನು ಉಲ್ಲಂಘಿಸಿದಲ್ಲಿ, ಅಂಥ ಗುತ್ತಿಗೆ ಒಪ್ಪಂದ ಪತ್ರವನ್ನು ನವೀಕರಿಸತಕ್ಕದ್ದಲ್ಲ ಹಾಗೂ ಗುತ್ತಿಗೆದಾರನನ್ನು, ಪ್ರಾಧಿಕಾರವು ನಿವೇಶನದಿಂದ ತೆರವುಗೊಳಿಸತಕ್ಕದ್ದು ಮತ್ತು ನಾಗರೀಕ ಸೌಕರ್ಯ ನಿವೇಶನವನ್ನು ಪ್ರಾಧಿಕಾರವು ಹಿಂತೆಗೆದುಕೊಂಡ ಹಾಗೂ ತನ್ನಲ್ಲಿ ನಿಹಿತಗೊಳಿಸಿಕೊಳ್ಳತಕ್ಕದ್ದು.

(2) ಗುತ್ತಿಗೆಯನ್ನು ನವೀಕರಿಸದಿದ್ದರೆ, ಗುತ್ತಿಗೆಯ ಮುಂಚೆ ಅದನ್ನು ಕೊನೆಗೊಳಿಸದಿದ್ದರೆ ಅಥವಾ ಸಮಾಪನಗೊಳಿಸದಿದ್ದರೆ, ಗುತ್ತಿಗೆ ಒಪ್ಪಂದ ಪತ್ರವು ಅಂತಿಮಗೊಂಡ ತರುವಾಯ ಅಥವಾ ಸಂದರ್ಭಾನುಸಾರ, ಅದರ ಸಮಾಪನದ ಅಥವಾ ಕೊನೆಗೊಂಡ ತರುವಾಯ, ಹಂಚಿಕೆಯಾಗಿರುವ ನಿವೇಶನವನ್ನು ಅದರಲ್ಲಿ ನಿರ್ಮಿಸಿರುವ ಕಟ್ಟಡ ಸಹಿತವಾಗಿ ಪ್ರಾಧಿಕಾರದೊಂದಿಗೆ ಎಲ್ಲಾ ಪೂರ್ವಾಧಿಯಿಂದ ಖರ್ಚಿಲ್ಲದೆ ಮತ್ತು ಮುಕ್ತವಾಗಿ ನಿಹಿತವಾಗತಕ್ಕದ್ದು ಹಾಗೂ ಪ್ರಾಧಿಕಾರವು, ನಿವೇಶನವನ್ನು ಪ್ರವೇಶಿಸಲು ಹಾಗೂ ಅದರ ಮೇಲೆ ಸ್ವಾಧೀನವನ್ನು ಹೊಂದಲು ಹಕ್ಕನ್ನು ಹೊಂದಿರತಕ್ಕದ್ದು.

16. ರಿಜಿಸ್ಟಾರ್ ಪುಸ್ತಕದ ನಿರ್ವಹಣೆ:- ಪ್ರತಿಯೊಂದು ಪ್ರಾಧಿಕಾರವು, ನಾಗರೀಕ ಸೌಕರ್ಯ ನಿವೇಶನಗಳ ಒಂದು ರಿಜಿಸ್ಟಾರ್ ಪುಸ್ತಕವನ್ನು ನಿರ್ವಹಿಸತಕ್ಕದ್ದು, ಈ ರಿಜಿಸ್ಟಾರ್‌ನಲ್ಲಿ ನಾಗರೀಕ ಸೌಕರ್ಯ ನಿವೇಶನದ ಸಂಖ್ಯೆ, ನಿವೇಶನ ಇರುವ ಸ್ಥಳ, ಯಾವ ಉದ್ದೇಶಕ್ಕಾಗಿ ಗುತ್ತಿಗೆಗೆ ನೀಡಲಾಗಿದೆ ಮತ್ತು ಗುತ್ತಿಗೆಯ ಅವಧಿ, ಕೇಂದ್ರ ಅಥವಾ ರಾಜ್ಯ ಸರ್ಕಾರದ ಇಲಾಖೆಗಳು, ಶಾಸನಾತ್ಮಕ ನಿಕಾಯಗಳು ಮತ್ತು ಸಂಸ್ಥೆಗಳಿಗೆ ಗುತ್ತಿಗೆಗೆ ಕೊಟ್ಟಿರುವ ನಾಗರೀಕ ಸೌಕರ್ಯ ನಿವೇಶನಗಳ ವಿವರಗಳು, ಗುತ್ತಿಗೆಗೆ ನೀಡಲಾದ ನಾಗರೀಕ ಸೌಕರ್ಯ ನಿವೇಶನದ ವಿಸ್ತೀರ್ಣ, ಗುತ್ತಿಗೆಯ ಮೊತ್ತ ಹಾಗೂ ಅಂಥ ಇತರ ವಿವರಗಳನ್ನು ನಮೂದಿಸತಕ್ಕದ್ದು, ರಿಜಿಸ್ಟಾರ್ **ನಮೂನೆ-IV** ರಲ್ಲಿರತಕ್ಕದ್ದು, ನಾಗರೀಕ ಸೌಕರ್ಯ ನಿವೇಶನಗಳು ಮತ್ತು ಹಂಚಿಕೆಯ ವಿವರಗಳು ಮತ್ತು ಪ್ರಾಧಿಕಾರದಲ್ಲಿ ಲಭ್ಯವಿರುಬಹುದಾದ ಉಳಿದ ನಿವೇಶನಗಳ ಮಾಹಿತಿಯನ್ನು ಪ್ರತಿವರ್ಷ ಪ್ರಾಧಿಕಾರದ ವೆಬ್-ಸೈಟಿನಲ್ಲಿ ಪ್ರಕಟಿಸತಕ್ಕದ್ದು.

17. ಸ್ವಇಚ್ಛೆಯಿಂದ ಬಿಟ್ಟುಕೊಡುವುದು:- ಹಂಚಿಕೆ ಪಡೆದವನು ಅಥವಾ ಗುತ್ತಿಗೆದಾರನು ಹಂಚಿಕೆಯಾದ ನಂತರ ಯಾವುದೇ ಸಮಯದಲ್ಲಿ, ಗುತ್ತಿಗೆ ಅವಧಿಯಲ್ಲಿ ಪ್ರಾಧಿಕಾರದಿಂದ ಹಂಚಿಕೆಯಾದ ಅಥವಾ ಗುತ್ತಿಗೆಗೆ ನೀಡಲಾದ ನಾಗರೀಕ ಸೌಕರ್ಯ ನಿವೇಶನವನ್ನು ಬಿಟ್ಟುಕೊಡಬಹುದು. ಅಂಥ ಬಿಟ್ಟುಕೊಡುವಿಕೆ ಮೇಲೆ ಪ್ರಾಧಿಕಾರವು ಹಂಚಿಕೆ ಪಡೆದವನು ಸಂದಾಯ ಮಾಡಿರುವ ಗುತ್ತಿಗೆ ಹಣವನ್ನು, ಸದರಿ ನಾಗರೀಕ ಸೌಕರ್ಯ ನಿವೇಶನಕ್ಕೆ ಸಂಬಂಧಪಟ್ಟ ಗುತ್ತಿಗೆ ಹಣದಲ್ಲಿ ಶೇಕಡಾ ಹತ್ತರಷ್ಟು ಕಳೆದ ತರುವಾಯ ಮರು ಸಂದಾಯ ಮಾಡತಕ್ಕದ್ದು. ಪ್ರಾಧಿಕಾರವು, ನಾಗರೀಕ ಸೌಕರ್ಯ ನಿವೇಶನವನ್ನು ಬಿಟ್ಟುಕೊಟ್ಟ ದಿನಾಂಕದಂದು ಅಸ್ತಿತ್ವದಲ್ಲಿರಬಹುದಾದ ಯಾವುದೇ ವಿವಿಧ ಸ್ವರೂಪದ ನಷ್ಟ ಪರಿಹಾರವನ್ನು ಸಂದಾಯ ಮಾಡುವ ಹೊಣೆಯನ್ನು ಹೊಂದಿರುವುದಿಲ್ಲ.

18. ನಾಗರೀಕ ಸೌಕರ್ಯ ನಿವೇಶನದ ಹಂಚಿಕೆಯ ಪುನರಾವಲೋಕನ:-

(1) ಪ್ರಾಧಿಕಾರವು **(5)ನೇ ಅಥವಾ (6)ನೇ ನಿಯಮದ ಅಡಿಯಲ್ಲಿ ಮಾರಾಟ ಮಾಡಿದ ಮತ್ತು 7ನೇ ನಿಯಮದ ಅಡಿಯಲ್ಲಿ ಹಂಚಿಕೆ ಮಾಡಿದ ನಾಗರೀಕ ಸೌಕರ್ಯ** ನಿವೇಶನದ ಯಾವುದೇ ಹಂಚಿಕೆಯ ಅವಶ್ಯಕ ವಿವರಗಳೊಂದಿಗೆ ಮಾಹಿತಿಯ ಒಂದು ಪ್ರತಿಯನ್ನು ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆಯ ಅಧಿಕಾರಿ ವ್ಯಾಪ್ತಿಯ ಅಪರ ನಿರ್ದೇಶಕರಿಗೆ ಅಥವಾ ವಲಯದ ಜಂಟಿ ನಿರ್ದೇಶಕರಿಗೆ ಅಥವಾ ವಿಭಾಗೀಯ ಕಛೇರಿಗಳಿಗೆ ಕಳುಹಿಸಿಕೊಡತಕ್ಕದ್ದು:

ಪರಂತು, ಹಾಗೇ ಕಳುಹಿಸಲಾದ ಮಾಹಿತಿಯನ್ನು ಮೇಲೆ ನಿರ್ದಿಷ್ಟಪಡಿಸಲಾದಂತೆ ಗೊತ್ತುಪಡಿಸಲಾದ ಅಧಿಕಾರಿಯ ಪುನರವಲೋಕನ ಮಾಡತಕ್ಕದ್ದು ಹಾಗೂ ಗಮನಾರ್ಹವಾದ ಯಾವುದೇ ವ್ಯತ್ಯಾಸಗಳು ಕಂಡುಬಂದಲ್ಲಿ ಅವುಗಳನ್ನು ತಿಳಿಸತಕ್ಕದ್ದು ಮತ್ತು ಅಂಥ ಮಾಹಿತಿಯನ್ನು ಸ್ವೀಕರಿಸಿದ ಮೂವತ್ತು ದಿನಗಳೊಳಗಾಗಿ ಅಗತ್ಯ ಸೂಚನೆ ಅಥವಾ ನಿರ್ದೇಶನಗಳನ್ನು ಪ್ರಾಧಿಕಾರಕ್ಕೆ ನೀಡತಕ್ಕದ್ದು. ಹಾಗೇ ನೀಡಲಾದ ನಿವೇಶನಗಳನ್ನು ಪ್ರಾಧಿಕಾರವು ಪಾಲಿಸತಕ್ಕದ್ದು ಮತ್ತು ಅಂಥ ನಿರ್ದೇಶನಗಳನ್ನು ಸ್ವೀಕರಿಸಿದ ದಿನಾಂಕದಿಂದ ಅರವತ್ತು ದಿನಗಳೊಳಗಾಗಿ ಮತ್ತೇ ಮಾಹಿತಿ ನೀಡತಕ್ಕದ್ದು.

ಮೇಲೆ ನಿರ್ದಿಷ್ಟಪಡಿಸಲಾದಂತೆ ಗೊತ್ತುಪಡಿಸಲಾದ ಅಧಿಕಾರಿಯು ನೀಡಿದ ನಿರ್ದೇಶನಗಳನ್ನು ಪಾಲಿಸದೇ ಇರುವ ಸಂದರ್ಭಗಳಲ್ಲಿ ಅದನ್ನು ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆಗೆ, ಗಮನಿಸಲಾದ ವ್ಯತ್ಯಾಸಗಳ ಬಗ್ಗೆ ಕ್ರಮ ಕೈಗೊಳ್ಳಲು ವರದಿ ಮಾಡತಕ್ಕದ್ದು.

19. ಅಪೀಲು:- ಅಂಥ ತೀರ್ಮಾನದ ಮೂವತ್ತು ದಿನಗಳೊಳಗಾಗಿ ಪ್ರಾಧಿಕಾರದ ಯಾವುದೇ ತೀರ್ಮಾನದಿಂದ ಬಾಧಿತನಾದ ಹಂಚಿಕೆ ಪಡೆದವನು ಅಥವಾ ಗುತ್ತಿಗೆದಾರನು ಅಥವಾ ಯಾವುದೇ ಪಕ್ಷಕಾರನು ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆಯ ಸಂಬಂಧಪಟ್ಟ ವಲಯ ಅಥವಾ ವಿಭಾಗೀಯ ಕಚೇರಿಯ ಅಪರ ನಿರ್ದೇಶಕರಿಗೆ ಅಥವಾ ಜಂಟಿ ನಿರ್ದೇಶಕರಿಗೆ ಅಪೀಲು ಮಾಡಬಹುದು. ಅಂಥ ಅಪೀಲುಗಳನ್ನು ಸ್ವೀಕರಿಸಿದ ತೊಂಬತ್ತು ದಿನಗಳೊಳಗಾಗಿ ಅರ್ಜಿದಾರನಿಗೆ ಅಹವಾಲನ್ನು ಹೇಳಿಕೊಳ್ಳುವ ಅವಕಾಶವನ್ನು ನೀಡಿದ ತರುವಾಯ ಅಪೀಲುಗಳನ್ನು ವಿಲೇ ಮಾಡತಕ್ಕದ್ದು.

20. ಲೆಕ್ಕ ಪರಿಶೋಧನೆ:- (1) ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆಯ ಸಂಬಂಧಪಟ್ಟ ವಲಯ ಅಥವಾ ವಿಭಾಗೀಯ ಕಚೇರಿಗಳ ನಗರ ಮತ್ತು ಗ್ರಾಮಾಂತರ ಯೋಜನೆಯ ಅಪರ ನಿರ್ದೇಶಕರು ಅಥವಾ ಜಂಟಿ ನಿರ್ದೇಶಕರು, ಪ್ರತಿ ಹಣಕಾಸು ವರ್ಷದ ಮುಕ್ತಾಯದ ಆರು ತಿಂಗಳುಗಳೊಳಗಾಗಿ ನಾಗರೀಕ ಸೌಕರ್ಯ ನಿವೇಶನಗಳ ಹಂಚಿಕೆಗೆ ಸಂಬಂಧಿಸಿದ ಎಲ್ಲಾ ವ್ಯವಹಾರಗಳನ್ನು ಲೆಕ್ಕ ಪರಿಶೋಧನೆ ಮಾಡತಕ್ಕದ್ದು.

(2) ಪ್ರಾಧಿಕಾರವು ಸರ್ಕಾರದ ಅಂಗೀಕಾರದಂತೆ ಲೆಕ್ಕಪರಿಶೋಧನಾ ವರದಿಗಳನ್ನು ಕಳುಹಿಸಿಕೊಡತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

-ಸಹಿ-
(ನಾಗರಾಜ)
ಸರ್ಕಾರದ ಅಧೀನ ಕಾರ್ಯದರ್ಶಿ
ನಗರಾಭಿವೃದ್ಧಿ ಇಲಾಖೆ

(ಲತಾ.ಕೆ)
ಸರ್ಕಾರದ ಅಧೀನ ಕಾರ್ಯದರ್ಶಿ,
(ಅಭಿವೃದ್ಧಿ ಪ್ರಾಧಿಕಾರಗಳು ಮತ್ತು ನಯೋಸೇ)
ನಗರಾಭಿವೃದ್ಧಿ ಇಲಾಖೆ

ನಮೂನೆ-I
(8ನೇ ನಿಯಮದ (2)ನೇ ಉಪ-ನಿಯಮವನ್ನು ನೋಡಿ)
ನೋಂದಣಿ

1	ನೋಂದಣಿ ಸಂಖ್ಯೆ		
2	(ಎ)	ಸಂಸ್ಥೆಯ ಹೆಸರು	
	(ಬಿ)	ಸಂಸ್ಥೆಯ ಮುಖ್ಯಸ್ಥನ ಹೆಸರು:	
	(ಸಿ)	ಸಂಸ್ಥೆ ಮುಖ್ಯಸ್ಥನ ಪದನಾಮ:	
	(ಡಿ)	ಸಂಸ್ಥೆಯ ಅಧಿಕೃತ ಪ್ರತಿನಿಧಿ ಅಥವಾ ವ್ಯಕ್ತಿಯ ಹೆಸರು	
3	ವಿಳಾಸ		
4	ನೋಂದಣಿ ಶುಲ್ಕದ ವಿವರಗಳು ಪಾವತಿ ಮಾಡಿರುವ ಮೊಬಲಗು: ಡಿ.ಡಿ. ಸಂಖ್ಯೆ: ದಿನಾಂಕ: ಬ್ಯಾಂಕಿನ ಹೆಸರು ಮತ್ತು ಶಾಖೆ:		

ನೋಂದಣಿದಾರರ ಸಹಿ

ಠೇವಣಿ ಪಡೆದ ನೋಂದಣಿದಾರನ ಸಹಿ

ದಿನಾಂಕ:

ನಮೂನೆ- II

(9ನೇ ನಿಯಮದ (2)ನೇ ಉಪ-ನಿಯಮವನ್ನು ನೋಡಿ)

ಪತ್ರಿಕಾ ಪ್ರಕಣೆಯ ಸಂಖ್ಯೆ _____ ಮೇರೆಗೆ ನಾಗರೀಕ ಸೌಕರ್ಯ ನಿವೇಶನದ ಹಂಚಿಕೆಗಾಗಿ ಅರ್ಜಿ ನಮೂನೆ

ವಿನ್ಯಾಸದ ಹೆಸರು:

ಮೀಸಲಿಟ್ಟಿರುವ ನಾಗರೀಕ ಸೌಕರ್ಯದ ಉದ್ದೇಶ:

1	(ಎ)	ಅರ್ಜಿದಾರನ (ಸಂಸ್ಥೆಯ) ಹೆಸರು	
	(ಬಿ)	ಸಂಸ್ಥೆಯ ಪದಾಧಿಕಾರಿಗಳ ಹೆಸರು	
	(ಸಿ)	ಸಂಸ್ಥೆಯ ನೋಂದಣಿ ವಿವರಗಳು ಮತ್ತು ಅಂಥ ನೋಂದಣಿಯ ದಿನಾಂಕ (ಸಂಸ್ಥೆಯು ಲಗತ್ತಿಸಬೇಕಾಗಿರುವ ಪ್ರಮಾಣಪತ್ರ ಅಥವಾ ನೋಂದಣಿಯ ಪ್ರತಿ)	
2		ಹಂಚಿಕೆಯನ್ನು ಕೋರುವುದಕ್ಕಾಗಿ ಹೊರಡಿಸಲಾದ ಠರಾವಿನ ದಿನಾಂಕ (ಲಗತ್ತಿಸಬೇಕಾಗಿರುವ ಪ್ರತಿ)	
3		ಪತ್ರ ವ್ಯವಹಾರದ ವಿಳಾಸ	
4		---------ಯೋಜನಾ ಪ್ರಾಧಿಕಾರದೊಂದಿಗೆ ದಾಖಲಾತಿ (Enrolment) ಸಂಖ್ಯೆ	
5		ಗುತ್ತಿಗೆ ಮೊತ್ತ: ಡಿ.ಡಿ. ಸಂಖ್ಯೆ: ದಿನಾಂಕ:	
6		(ಎ) ಅರ್ಜಿ ಸಲ್ಲಿಸಲಾದ ನಾಗರೀಕ ಸೌಕರ್ಯ ನಿವೇಶನದ ಸಂಖ್ಯೆ: (ಬಿ) ನಾಗರೀಕ ಸೌಕರ್ಯ ನಿವೇಶನದ ಉದ್ದೇಶ: (ಸಿ) ನಾಗರೀಕ ಸೌಕರ್ಯ ನಿವೇಶನದ ಸ್ಥಳ:	
7		ನಾಗರೀಕ ಸೌಕರ್ಯ ನಿವೇಶನಕ್ಕಾಗಿ ಪ್ರಾಧಿಕಾರಕ್ಕೆ ಈಗಾಗಲೇ ಎಷ್ಟು ಬಾರಿ ಅರ್ಜಿಯನ್ನು ಸಲ್ಲಿಸಿರುವಿರಿ. ಅರ್ಜಿ ಸಂಖ್ಯೆ, ದಿನಾಂಕ ಮತ್ತು ಠೇವಣಿ ಮಾಡಿದ ಪ್ರಾರಂಭಿಕ ಹಣದ ವಿವರಗಳನ್ನು ಒದಗಿಸಿ.	
8		ಯಾವ ಬಗೆಯ ನಾಗರೀಕ ಸೌಕರ್ಯಕ್ಕಾಗಿ ನಿವೇಶನವನ್ನು ಕೊಡಲಾಗಿದೆಯೋ ಅಂತ ಬಗೆಯ ನಾಗರೀಕ ಸೌಕರ್ಯವನ್ನು ಒದಗಿಸುವುದಕ್ಕಾಗಿ ಸಂಸ್ಥೆಗಿರುವ ಸಾಮರ್ಥ್ಯದ ವಿವರಗಳು.	
9		ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಪಂಗಡಗಳ ಅನುಕೂಲಕ್ಕಾಗಿಯೇ ನಿಮ್ಮ ಸಂಸ್ಥೆಯನ್ನು ಸ್ಥಾಪಿಸಲಾಗಿದೆಯೇ ಮತ್ತು ಬಹು ಸಂಖ್ಯೆಯ ಸದಸ್ಯರು ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಪಂಗಡಗಳಿಗೆ ಸೇರಿದವರಾಗಿದ್ದಾರೆಯೇ	
10		ಸಂಸ್ಥೆಯು ಸ್ಥಾಪನೆಯಾದಂದಿನಿಂದ ಅದರ ಉದ್ದೇಶಗಳು ಮತ್ತು ಕಾರ್ಯ ಚಟುವಟಿಕೆಗಳು ಹಾಗೂ ಅದು ಸಲ್ಲಿಸಿರುವ ಸಾರ್ವಜನಿಕ ಸೇವೆ (ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿಯ ಪ್ರತಿ ಯಾವುದಾದರೂ ಇದ್ದಲ್ಲಿ ಅದನ್ನು ಲಗತ್ತಿಸುವುದು)	
11		ನಿಮ್ಮ ಸಂಸ್ಥೆಯ ಹಣಕಾಸಿನ ಸ್ಥಿತಿಗತಿ	
12		ಸಂಸ್ಥೆಯ ಈಗಿನ ಸ್ಥಳ	

ಮೇಲಿನ ಮಾಹಿತಿಯು ನನಗೆ ತಿಳಿದಮಟ್ಟಿಗೆ ಸತ್ಯವಾಗಿದೆ ಹಾಗೂ ಯಾವುದನ್ನು ಮುಚ್ಚಿಟ್ಟಿಲ್ಲವೆಂದು ಈ ಮೂಲಕ ಘೋಷಿಸುತ್ತೇನೆ. ಮೇಲೆ ಒದಗಿಸಿರುವ ಮಾಹಿತಿಯು ತಪ್ಪಾಗಿರುವುದೆಂದು ಹಾಗೂ ಸುಳ್ಳೆಂದು ಕಂಡುಬಂದಲ್ಲಿ ಹಂಚಿಕೆಗಾಗಿ ಸಲ್ಲಿಸಿದ ನನ್ನ ಅರ್ಜಿಯನ್ನು ತಿರಸ್ಕರಿಸತಕ್ಕದ್ದು ಹಾಗೂ ಸಂದಾಯ ಮಾಡಿರುವ ಹಣವನ್ನು ಪ್ರಾಧಿಕಾರವು ಮುಟ್ಟುಗೋಲು ಹಾಕಿಕೊಳ್ಳತಕ್ಕದ್ದು.

ದಿನಾಂಕ: ಅರ್ಜಿದಾರನ ಸಹಿ

ನಮೂನೆ- III
(14ನೇ ನಿಯಮದ ಸಿ (2)ನೇ ಉಪ-ನಿಯಮವನ್ನು ನೋಡಿ)
ನೋಂದಣಿ
ಗುತ್ತಿಗೆ ಒಪ್ಪಂದ ಪತ್ರ

1. ಎರಡು ಸಾವಿರದ ---------- ಇಸವಿಯ ---------- ತಿಂಗಳ ----------ದಿನಾಂಕದಂದು ಇದರಲ್ಲಿ ಇನ್ನು ಮುಂದೆ 'ಗು ರ' ಎಂದು ಕರೆಯಲಾಗುವ ಗುತ್ತಿಗೆದಾರ ---------- ಒಂದು ಪಕ್ಷವಾಗಿ ಮತ್ತು ಇದರಲ್ಲಿ ಇನ್ನು ಮುಂದೆ 'ಗುತ್ತಿಗೆ ನೀಡುವವನು' ಎಂದು ಕರೆಯಲಾಗುವ ಯೋಜನಾ ಪ್ರಾಧಿಕಾರ ಪ್ರತಿನಿಧಿಸುವ ಅದರ ಸದಸ್ಯ ಕಾರ್ಯದರ್ಶಿ ಮತ್ತೊಂದು ಪಕ್ಷವಾಗಿ ಇವರ ನಡುವೆ ಈ ಒಪ್ಪಂದವನ್ನು ಮಾಡಿಕೊಳ್ಳಲಾಗಿದೆ. ಈ ಒಪ್ಪಂದ ಪತ್ರದಲ್ಲಿ, ಮೇಲೆ ನಮೂದಿಸಲಾಗಿರುವ 'ಗುತ್ತಿ ರ' ಮತ್ತು 'ಗುತ್ತಿ ನೀಡುವವನು' ಎಂಬ ಪದಗಳು, ಪದದಲ್ಲಿರುವ ಉತ್ತರಾಧಿಕಾರಿ, ಪ್ರತಿನಿಧಿ ಅಥವಾ ನಿಯೋಜಿತ ವ್ಯಕ್ತಿ ಎಂಬ ಅರ್ಥವನ್ನು ಹೊಂದಿರತಕ್ಕದ್ದು ಮತ್ತು ಅವರನ್ನು ಒಳಗೊಂಡಿರತಕ್ಕದ್ದು. ಈ ಕೆಳಗಿನಂತೆ ಸಾಕ್ಷಿಯಾಗಿದೆ.

2. ಗುತ್ತಿಗೆ ಪಡೆದವನು ಇದರಲ್ಲಿ ಹೇಳಲಾಗಿರುವ ನಿರ್ದಿಷ್ಟ ಉದ್ದೇಶಕ್ಕಾಗಿ ---------- ನಿಮಾ ಣಕ್ಕಾಗಿ ಸದರಿ ನಿವೇಶನದ ಸೌಲಭ್ಯ ಮತ್ತು ಉಪಯೋಗ ಪಡೆಯಲು ಗುತ್ತಿಗೆದಾರನಿಗೆ ನಾಗರೀಕ ಸೌಕರ್ಯ ನಿವೇಶನವನ್ನು ಗುತ್ತಿಗೆ ನೀಡುವಂತೆ ಗುತ್ತಿಗೆ ನೀಡುವವನಿಗೆ ಅರ್ಜಿ ಸಲ್ಲಿಸಿದ್ದು, ಗುತ್ತಿಗೆ ನೀಡುವವನು ಅನುಸೂಚಿತ ಭೂಮಿಯನ್ನು ಗುತ್ತಿಗೆದಾರನಿಗೆ ಇದರಲ್ಲಿ ಈ ತರುವಾಯ ಹೇಳಲಾದ ನಿಬಂಧನೆಗಳ ಮತ್ತು ಷರತ್ತುಗಳಿಗೊಳಪಟ್ಟು ಗುತ್ತಿಗೆ ನೀಡಲು ಒಪ್ಪಿದ್ದಾನೆ. ಈ ಒಪ್ಪಂದಕ್ಕಿರುವ ಅನುಸೂಚಿಯಲ್ಲಿ ಹೆಚ್ಚು ಸ್ಪಷ್ಟವಾಗಿ ವಿವರಿಸಿರುವ ಗುತ್ತಿಗೆ ಸ್ವತ್ತನ್ನು, ಸ್ವಾಧೀನತಾ ಪತ್ರವನ್ನು ನೀಡಿದ ದಿನಾಂಕದಿಂದ ಪ್ರಾರಂಭವಾಗುವ ಮೂವತ್ತು ವರ್ಷಗಳ ಅವಧಿಗಾಗಿ ಗುತ್ತಿಗೆಗೆ ನೀಡಲಾಗಿದೆ.

3. **13ನೇ ನಿಯಮದನುಸಾರವಾಗಿ** ಲೆಕ್ಕ ಹಾಕಲಾದಂತಹ ---------- ರೂಪಾಯಿ (---------- ರೂಪಾಯಿ) ಗಳ ಗುತ್ತಿಗೆ ಹಣದ ಅಸಲು ಹಣವನ್ನು ಗುತ್ತಿಗೆ ಕೊಡುವವನಿಗೆ ಪಾವತಿ ಮಾಡಲು ಗುತ್ತಿಗೆದಾರನು ಒಪ್ಪಿಕೊಂಡಿದ್ದಾನೆ.

4. ಈ ಒಪ್ಪಂದದಲ್ಲಿ ಗೊತ್ತುಪಡಿಸಲಾದ ಮೂವತ್ತು ವರ್ಷಗಳ ಗುತ್ತಿಗೆ ಅವಧಿಯು ಪೂರ್ಣಗೊಂಡ ತರುವಾಯ, ಕರ್ನಾಟಕ ಯೋಜನಾ ಪ್ರಾಧಿಕಾರಗಳ (ನಾಗರೀಕ ಸೌಕರ್ಯ ನಿವೇಶನಗಳ ಹಂಚಿಕೆ) ನಿಯಮಗಳು, 2016ರ 15ನೇ ನಿಯಮದ ಅಡಿಯಲ್ಲಿ ನಿಗದಿಪಡಿಸುವ ಬಾಡಿಗೆ ಹಣದ ಸಂದಾಯದ ನಂತರ ಅಥವಾ ಪ್ರತ್ಯೇಕ ಪತ್ರದ ಮೂಲಕ ಗುತ್ತಿಗೆ ಕೊಡುವವನು ನಿಗದಿಪಡಿಸುವ ಯಾವುದೇ ಇತರ ಮೊಬಲಗಿನ ಸಂದಾಯದ ನಂತರ, "ಗುತ್ತಿಗೆ ಕೊಡುವವನು" ನಿರ್ಧರಿಸಿರುವ ಅವಧಿಗಾಗಿ ನವೀಕರಣದ ಷರತ್ತುಗಳಿಗೊಳಪಟ್ಟು ನವೀಕರಿಸಬಹುದು.

5. ಗುತ್ತಿಗೆದಾರನು ಅನುಸೂಚಿತ ಸ್ವತ್ತನ್ನು ----------ನ ನಿರ್ಮಾಣದ ಉದ್ದೇಶಕ್ಕಾಗಿ ಹಾಗೂ ನಾಗರೀಕ ಸೌಕರ್ಯವನ್ನು ಒದಗಿಸುವುದಕ್ಕಾಗಿ ಮಾತ್ರ ಬಳಸತಕ್ಕದ್ದು ಮತ್ತು ಅದನ್ನು ಯಾವುದೇ ಇತರ ಉದೇಶಕ್ಕಾಗಿ ಉಪಯೋಗಿಸತಕ್ಕದ್ದಲ್ಲ.

6. ಗುತ್ತಿಗೆದಾರನು, ಅನುಸೂಚಿತ ಸ್ವತ್ತನ್ನು ಪೂರ್ಣವಾಗಿ ಅಥವಾ ಭಾಗಶಃ ಉಪ-ವಿಭಾಗ ಮಾಡತಕ್ಕದ್ದಲ್ಲ ಅಥವಾ ಗುತ್ತಿಗೆಯ ಮೂಲಕ ಅಥವಾ ಅನ್ಯಥಾ ಪರಭಾರೆ ಮಾಡತಕ್ಕದ್ದಲ್ಲ ಅಥವಾ ಯಾವುದೇ ಹೊಣೆಯನ್ನು ಸೃಜಿಸತಕ್ಕದ್ದಲ್ಲ ಅಥವಾ ಅನ್ಯಥಾ ವ್ಯವಹರಿಸತಕ್ಕದ್ದಲ್ಲ.

7. ಗುತ್ತಿಗೆದಾರನು, ಸಂಬಂಧಪಟ್ಟ ಸ್ಥಳೀಯ ಪ್ರಾಧಿಕಾರದಿಂದ ಲೈಸೆನ್ಸನ್ನು ಪಡೆಯುವ ಮುಂಚೆ ನಾಗರೀಕ ಸೌಕರ್ಯ ನಿವೇಶನದಲ್ಲಿ ಕಟ್ಟಡವನ್ನು ನಿರ್ಮಾಣ ಮಾಡುವುದಕ್ಕಾಗಿ ಪ್ರಾಧಿಕಾರದಿಂದ ಅನುಮೋದನೆಯನ್ನು ಪಡೆಯತಕ್ಕದ್ದು. ಗುತ್ತಿಗೆದಾರನು ಸ್ಥಳೀಯ ಪ್ರಾಧಿಕಾರದಿಂದ ಲೈಸೆನ್ಸನ್ನು ಪಡೆದ ದಿನದಿಂದ ಮೂರು ವರ್ಷಗಳೊಳಗೆ ಕಟ್ಟಡದ ನಿರ್ಮಾಣವನ್ನು ಪೂರ್ಣಗೊಳಿಸತಕ್ಕದ್ದು.

8. ನಿವೇಶನವನ್ನು ಸ್ವಾಧೀನಕ್ಕೆ ತೆಗೆದುಕೊಂಡ ದಿನಾಂಕದಿಂದ ಪರಿಣಾಮಕಾರಿಯಾಗುವಂತೆ, ಗುತ್ತಿಗೆದಾರನು ನಾಗರೀಕ ಸೌಕರ್ಯ ನಿವೇಶನ ಮತ್ತು ಅದರಲ್ಲಿ ನಿರ್ಮಿಸಿದ ಯಾವುದೇ ಕಟ್ಟಡಕ್ಕೆ ಸಂಬಂಧಿಸಿದಂತೆ ಸಂದಾಯ ಮಾಡಬೇಕಾದ ಯಾವುದೇ ತೆರಿಗೆ, ಶುಲ್ಕ ಮತ್ತು ಉಪಕರವನ್ನು, ಸಂಬಂಧಪಟ್ಟ ಸ್ಥಳೀಯ ಪ್ರಾಧಿಕಾರಕ್ಕೆ ಸಂದಾಯ ಮಾಡಲು ಹೊಣೆಗಾರನಾಗಿರತಕ್ಕದ್ದು.

9. ಗುತ್ತಿಗೆದಾರನು ವಿಶೇಷವಾಗಿ ಇದರಲ್ಲಿ ಮೇಲೆ ಹೇಳಲಾದ ನಿರ್ಮಿತಿಯ ಹೊರತು ಯಾವುದೇ ಶಾಶ್ವತ ನಿರ್ಮಿತಿಯನ್ನು ನಿರ್ಮಿಸತಕ್ಕದ್ದಲ್ಲ.

10. ಗುತ್ತಿಗೆದಾರನು ಸ್ವತ್ತಿಗೆ ಮಾಲೀಕನಾಗತಕ್ಕದ್ದಲ್ಲ ಅಥವಾ ಅದರ ಮೇಲೆ ಯಾವುದೇ ಹಕ್ಕನ್ನು ಹೊಂದತಕ್ಕದ್ದಲ್ಲ.

11. ಗುತ್ತಿಗೆದಾರನು, ನಾಗರೀಕ ಸೌಕರ್ಯ ನಿವೇಶನಗಳನ್ನು ಯಾವುದೇ ಹಣಕಾಸು ಸಂಸ್ಥೆಗೆ ಅಡಮಾನ ಮಾಡತಕ್ಕದ್ದಲ್ಲ.

12. ಗುತ್ತಿಗೆದಾರನು, ನಿಗದಿಪಡಿಸಿರುವ ಗುತ್ತಿಗೆ ಮೊಬಲಗು ತಾತ್ಕಾಲಿಕವೆಂದು ಮತ್ತು ಹೆಚ್ಚಿಸುವುದಕ್ಕೆ ಒಳಪಟ್ಟಿರುತ್ತದೆಂಬುದನ್ನು ಒಪ್ಪಿಕೊಂಡಿದ್ದಾನೆ ಮತ್ತು **ಭೂ ಸ್ವಾಧೀನದಲ್ಲಿ, ನ್ಯಾಯೋಚಿತ ನಷ್ಟಪರಿಹಾರ ಮತ್ತು ಪಾರದರ್ಶಕತೆ, ಪುನರ್ವಸತಿ ಮತ್ತು ಪುನರ್ವ್ಯವಸ್ಥೆ ಹಕ್ಕು ಅಧಿನಿಯಮ, 2013ರ (2013ರ ಕೇಂದ್ರ ಅಧಿನಿಯಮ 30)** ಮೇರೆಗೆ ನ್ಯಾಯಾಲಯವು ಅನುಸೂಚಿತ ಸ್ವತ್ತು ಇರುವ ಹೆಚ್ಚುವರಿ ಭೂಮಿಗೆ ನಷ್ಟಪರಿಹಾರವನ್ನು ಹೆಚ್ಚಿಸಿದ ಸಂದರ್ಭದಲ್ಲಿ, ಹೆಚ್ಚಿಸಲಾದ ಗುತ್ತಿಗೆಯ ಮೊಬಲಗನ್ನು ಸಂದಾಯ ಮಾಡುವುದಕ್ಕೆ ಒಪ್ಪಿಕೊಂಡಿರುತ್ತಾನೆ.

13. ಗುತ್ತಿಗೆದಾರನು ಮೇಲೆ ನಮೂದಿಸಿರುವ ಯಾವುದೇ ನಿಬಂಧನೆಗಳು ಮತ್ತು ಷರತ್ತುಗಳನ್ನು ಉಲ್ಲಂಘಿಸತಕ್ಕದ್ದಲ್ಲ ಹಾಗೂ ಮೀರತಕ್ಕದ್ದಲ್ಲ ಹಾಗೂ ಗುತ್ತಿಗೆದಾರನು, ಯಾವುದೇ ನಿಬಂಧನೆಗಳು ಮತ್ತು ಷರತ್ತುಗಳನ್ನು ಉಲ್ಲಂಘಿಸಿದರೆ, ಗುತ್ತಿಗೆ ನೀಡುವವನು, ಗುತ್ತಿಗೆದಾರನಿಗೆ ಮೂವತ್ತು ದಿನಗಳೊಳಗೆ ನೋಟೀಸನ್ನು ನೀಡಿ ಅನುಸೂಚಿತ ಸ್ವತ್ತನ್ನು ಸ್ವಾಧೀನಕ್ಕೆ ತೆಗೆದುಕೊಳ್ಳುವ ಹಾಗೂ ಗುತ್ತಿಗೆದಾರ ಅಥವಾ ಅವನ ಮೂಲಕ ಕ್ಲೇಮು ಮಾಡುವ ಯಾವುದೇ ವ್ಯಕ್ತಿಯಿಂದ ಎಲ್ಲಾ ಆಕ್ಷೇಪಣೆಗಳಿಂದ ಮುಕ್ತವಾಗಿ ಸ್ವತ್ತನ್ನು ಪುನಃ ಸ್ವಾಧೀನ ಹೊಂದುವ ಸ್ವಾತಂತ್ರ್ಯವನ್ನು ಹೊಂದಿರುವನು ಮತ್ತು ಸಂದಾಯ ಮಾಡಲಾಗಿರುವ ಮೊಬಲಗು ಏನಾದರೂ ಇದ್ದರೆ, ಗುತ್ತಿಗೆ ಕೊಡುವವರು ಮುಟ್ಟುಗೋಲು ಹಾಕಿಕೊಳ್ಳಲು ಹೊಣೆಗಾರನಾಗಿರತಕ್ಕದ್ದು.

14. ಗುತ್ತಿಗೆ ನೀಡುವವನು ಒಪ್ಪಿರುವ ರೂ.---------- (---------- ರೂಪಾಯಿಗಳು) ಗಳ ಸಂಬಂಧದಲ್ಲಿ ಪಕ್ಷಕಾರರ ಈ ಒಪ್ಪಂದಕ್ಕೆ ಅನುಸೂಚಿಯಲ್ಲಿ ಮೇಲೆ ನಮೂದಿಸಿದ ದಿನದಂದು ಪಕ್ಷಕಾರರು ಸ್ವ-ಇಚ್ಛೆಯಿಂದ ಹಾಗೂ ಒಪ್ಪಿಗೆಯೊಂದಿಗೆ ಮೇಲ್ಕಂಡ ಅನುಸೂಚಿಯಲ್ಲಿ ಸೂಚಿಸಿರುವ ದಿನಾಂಕದಂದು ಅವರ ಹಸ್ತಾಕ್ಷರ ಮತ್ತು ಮೊಹರುಗಳನ್ನು ಹಾಕಿದ್ದಾರೆ.

ಅನುಸೂಚಿ

---------- ಜಿಲ್ಲೆಯ ---------- ತಾಲ್ಲೂಕಿನ ---------- ಗ್ರಾಮದ ---------- ಸರ್ವೆ ಸಂ ---------- ರಲ್ಲಿನ ---------- ಬಡಾವಣೆಯಲ್ಲಿ ನಾಗರೀಕ ಸೌಕರ್ಯ ನಿವೇಶನ ಸಂಖ್ಯೆ ---------- ಮೀಟರ್ ಅಳತೆಯುಳ್ಳ ಚೆಕ್ಕುಬಂದಿ.

ಪೂರ್ವಕ್ಕೆ:
ಪಶ್ಚಮಕ್ಕೆ:
ಉತ್ತರಕ್ಕೆ:
ದಕ್ಷಿಣಕ್ಕೆ:

ಸಾಕ್ಷಿದಾರರು:

1.

2.

ಗುತ್ತಿಗೆ ನೀಡುವವನ ಸಹಿ

ಸಾಕ್ಷಿದಾರರು:

1.

2.

ಗುತ್ತಿಗೆದಾರನ ಸಹಿ

(ನಾಗರಾಜ)
ಸರ್ಕಾರದ ಅಧೀನ ಕಾರ್ಯದರ್ಶಿ
ನಗರಾಭಿವೃದ್ಧಿ ಇಲಾಖೆ

(ಲತಾ.ಕೆ)
ಸರ್ಕಾರದ ಅಧೀನ ಕಾರ್ಯದರ್ಶಿ,
(ಅಭಿವೃದ್ಧಿ ಪ್ರಾಧಿಕಾರಗಳು ಮತ್ತು ನಯೋಸೇ)
ನಗರಾಭಿವೃದ್ಧಿ ಇಲಾಖೆ

PR-100

ಮುದ್ರಕರು ಹಾಗೂ ಪ್ರಕಾಶಕರು:– ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು

SUNIL GARDE Digitally signed by SUNIL GARDE
Date: 2021.03.16 18:32:59 +05'30'